# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ
ಶನಿವಾರ, ಸೆಪ್ಟೆಂಬರ್ 14, 2024

ಸಂಪುಟ : 51 ಸಂಚಿಕೆ : 122 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


## ಇಡಿ ಹೆಸರಿನಲ್ಲಿ ಬೆದರಿಸಿ ಹಣ ವಸೂಲಿ

**ನಗರದಲ್ಲಿ ಡಿಜಿಟಲ್ ಅರೆಸ್ಟ್ ಪ್ರಕರಣ; 34 ಲಕ್ಷ ರೂ. ವಂಚನೆ**

ದಾವಣಗೆರೆ, ಸೆ. 13 - ಅಕ್ರಮ ಹಣ ಪ್ರಕರಣದಲ್ಲಿ ಸಿಲುಕಿರುವುದಾಗಿ ಬೆದರಿಕೆ ಹಾಕಿ 'ಡಿಜಿಟಲ್ ಅರೆಸ್ಟ್' ಮಾಡಿ 34 ಲಕ್ಷ ರೂ.ಗಳ ವಂಚನೆ ಮಾಡಿರುವ ಘಟನೆ ನಗರದಲ್ಲಿ ನಡೆದಿದೆ.

ನಿಮ್ಮ ಹೆಸರಿನಲ್ಲಿ ಖರೀದಿಸಿರುವ ಸಿಮ್ ಕಾರ್ಡ್ ಅನ್ನು ಅಕ್ರಮ ಹಣಕ್ಕೆ ಬಳಕೆ ಮಾಡಲಾಗಿದೆ. ಇದರಿಂದಾಗಿ 17 ಪ್ರಕರಣಗಳು ದಾಖಲಾಗಿವೆ ಎಂದು ಹೇಳಿ ವಂಚಕರು ನಗರದ ವ್ಯಕ್ತಿಯೊಬ್ಬರಿಗೆ ಬೆದರಿಸಿ ಹಣ ಪಡೆದಿದ್ದಾರೆ. ಕಳೆದ ಗುರುವಾರದಂದು ಈ ಘಟನೆ ನಡೆದಿದೆ. ಈ ಬಗ್ಗೆ ಶುಕ್ರವಾರದಂದು ಪೊಲೀಸರಲ್ಲಿ ದೂರು ದಾಖಲಿಸಲಾಗಿದೆ.

ನಾವು ಟೆಲಿಕಾಂ ನಿಯಂತ್ರಕ ಟ್ರಾಯ್‌ನಿಂದ ಕರೆ ಮಾಡುತ್ತಿದ್ದೇವೆ. ನಿಮ್ಮ ಮೇಲೆ ಅಕ್ರಮ ಹಣದ 17 ಪ್ರಕರಣಗಳು ದಾಖಲಾಗಿವೆ. ಈ ಕುರಿತು (2ನೇ ಪುಟಕ್ಕೆ)

## ಈರುಳ್ಳಿ, ಬಾಸ್ಮತಿ ಅಕ್ಕಿ ರಫ್ತಿನ ಕನಿಷ್ಠ ಬೆಲೆ ಮಿತಿ ರದ್ದು

ನವದೆಹಲಿ, ಸೆ. 13 - ಈರುಳ್ಳಿ ಹಾಗೂ ಬಾಸ್ಮತಿ ಅಕ್ಕಿ ರಫ್ತಿಗೆ ಇದ್ದ ಕನಿಷ್ಠ ಬೆಲೆ ಮಿತಿಯನ್ನು ಕೇಂದ್ರ ಸರ್ಕಾರ ರದ್ದುಗೊಳಿಸಿದೆ. ಇದರಿಂದ ರಫ್ತು ಹೆಚ್ಚಾಗಲಿದೆ ಮತ್ತು ರೈತರ ಆದಾಯದಲ್ಲಿ ಏರಿಕೆಯಾಗಲಿದೆ

ಮಹಾರಾಷ್ಟ್ರ ಹಾಗೂ ಹರಿಯಾಣ ವಿಧಾನಸಭಾ ಚುನಾವಣೆಗಳು ಸನಿಹದಲ್ಲಿರುವಾಗಲೇ ಕನಿಷ್ಠ ರಫ್ತು ಬೆಲೆ ಮಿತಿಯನ್ನು ರದ್ದುಗೊಳಿಸಲು ನಿರ್ಧರಿಸಲಾಗಿದೆ. ಹರಿಯಾಣ ಹಾಗೂ ಪಂಜಾಬ್ ರಾಜ್ಯಗಳು ಬಾಸ್ಮತಿ ಅಕ್ಕಿ ಉತ್ಪಾದನೆಯಲ್ಲಿ ಮುಂಚೂಣಿ (2ನೇ ಪುಟಕ್ಕೆ)

## ನಂದಿನಿ ಹಾಲಿನ ದರ ಮತ್ತೆ ಹೆಚ್ಚಳ

ರಾಮನಗರ, ಸೆ. 13 – ನಂದಿನಿ ಹಾಲಿನ ದರ ಹೆಚ್ಚಿಸುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸುಳಿವು ನೀಡಿದ್ದಾರೆ. ಕಳೆದ ಜೂನ್ ತಿಂಗಳಲ್ಲಿ ರಾಜ್ಯ ಸರ್ಕಾರ ನಂದಿನಿ ಹಾಲಿನ ದರವನ್ನು ಲೀಟರ್‌ಗೆ 2 ರೂ. ಹೆಚ್ಚಿಸಿತ್ತು.

ರಾಮನಗರ ಜಿಲ್ಲೆಯ ಮಾಗಡಿ ಪಟ್ಟಣದಲ್ಲಿ ಹಲವು ಅಭಿವೃದ್ಧಿ ಕಾರ್ಯಕ್ರಮಗಳ ಉದ್ಘಾಟನೆ ಮತ್ತು ಶಂಕು ಸ್ಥಾಪನೆ ನೆರವೇರಿಸಿ ಮಾತನಾಡಿದ ಸಿದ್ದರಾಮಯ್ಯ, (2ನೇ ಪುಟಕ್ಕೆ)

## 27ಕ್ಕೆ ಮೇಯರ್ ಚುನಾವಣೆ

ದಾವಣಗೆರೆ, ಸೆ.13- ದಾವಣಗೆರೆ ಮಹಾ ನಗರಪಾಲಿಕೆ ಮಹಾಪೌರ, ಉಪ ಮಹಾಪೌರ ಸ್ಥಾನದ ಆಯ್ಕೆಗೆ ಇದೇ ದಿನಾಂಕ 27 ರ ಶುಕ್ರವಾರ ಪಾಲಿಕೆ ಸಭಾಂಗಣ ದಲ್ಲಿ ಪ್ರಾದೇಶಿಕ ಆಯುಕ್ತ ಅಮ್ಲಾನ್ ಆದಿತ್ಯ ಬಿಸ್ವಾಸ್ ಅಧ್ಯಕ್ಷತೆಯಲ್ಲಿ ಚುನಾವಣೆ ನಡೆಯಲಿದೆ ಎಂದು ಪಾಲಿಕೆ ಆಯುಕ್ತರಾದ ರೇಣುಕಾ ತಿಳಿಸಿದ್ದಾರೆ.







**ಮಕ್ಕಳ ವೈದ್ಯರ ನಿರಂತರ ಪ್ರೇರಣೆ**

**ಡಾ॥ ನಿರ್ಮಲಾ ಕೇಸರಿ ಪುಣ್ಯಸ್ಮರಣೆ**



ಜನನ : 14.09.1930

**ಡಾ॥ ನಿರ್ಮಲಾ ಕೇಸರಿ**

ಇವರ 95ನೇ ಹುಟ್ಟು ಹಬ್ಬದ ದಿನದಂದು
ನಮಗೆಲ್ಲಾ ತಾಯಿ ಸ್ವರೂಪಿ

**'ಮದರ್ ಕೇಸರಿ'**

ಅವರನ್ನು ನೆನೆಯುತ್ತಾ, ಅವರು ಹಾಕಿಕೊಟ್ಟ ಮಾರ್ಗದರ್ಶನ
ನಮ್ಮೆಲ್ಲರಿಗೂ ಎಂದೆಂದಿಗೂ ಸ್ಪೂರ್ತಿ...

ಮೇಡಂ ರವರಿಗೆ
ಭಕ್ತಿ ಪೂರ್ವಕ ನಮನಗಳು...

ನಿರ್ದೇಶಕರು, ವೈದ್ಯರು ಹಾಗೂ ಸಿಬ್ಬಂದಿ ವರ್ಗ,
ಬಾಪೂಜಿ ಮಕ್ಕಳ ಆಸ್ಪತ್ರೆ
ಪ್ರಾಂಶುಪಾಲರು ಮತ್ತು ಸಿಬ್ಬಂದಿ ವರ್ಗ
ಹಾಗೂ ಮಕ್ಕಳ ವಿಭಾಗ (JJMMC & SSIMS)
ದಾವಣಗೆರೆ, ಮಕ್ಕಳ ವೈದ್ಯರ ಸಂಘ
ಡಾ॥ ನಿರ್ಮಲಾ ಕೇಸರಿ ಪಿಡಿಯಾಟ್ರಿಕ್
ಅಕಾಡೆಮಿಕ್ ಟ್ರಸ್ಟ್








# ಶಿವ ಸಹಕಾರಿ ಬ್ಯಾಂಕ್ ನಿಯಮಿತ

ಆಡಳಿತ ಕಛೇರಿ : ಪಿ.ಬಿ. ನಂ. 48, ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ -577 001. ಫೋ. : 08192-256107

## ಬ್ಯಾಂಕಿನ 50ನೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

**ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರು :**



ಶ್ರೀ ಎಂ.ಬಿ. ಸಂಗಮೇಶ್ವರಗೌಡರು, ಅಧ್ಯಕ್ಷರು; ಶ್ರೀ ಐಗೂರು ಸಿ. ಚಂದ್ರಶೇಖರ್, ಉಪಾಧ್ಯಕ್ಷರು; ಶ್ರೀ ದೊಗ್ಗಳ್ಳಿ ಎಂ. ಬಸವರಾಜ್, ನಿರ್ದೇಶಕರು; ಶ್ರೀ ಬಿ.ಎಸ್. ಪ್ರಕಾಶ್, ನಿರ್ದೇಶಕರು; ಶ್ರೀ ಕೆ.ಜಿ.ಡಿ. ಪ್ರಭು, ನಿರ್ದೇಶಕರು; ಶ್ರೀ ಕಂಸಾಗರ ಪ್ರದೀಪ್, ನಿರ್ದೇಶಕರು; ಶ್ರೀ ಜಿ. ಸಿದ್ದಪ್ಪ, ನಿರ್ದೇಶಕರು; ಶ್ರೀ ಜಿ.ಪಿ. ವಾಗೀಶ್ ಬಾಬು, ನಿರ್ದೇಶಕರು; ಶ್ರೀ ಜೆ.ಎಸ್. ಸಿದ್ದಪ್ಪ, ನಿರ್ದೇಶಕರು; ಶ್ರೀಮತಿ ಎನ್. ವಸಂತ, ನಿರ್ದೇಶಕರು; ಶ್ರೀಮತಿ ಡಿ. ನಿರ್ಮಲ, ನಿರ್ದೇಶಕರು



ಶ್ರೀ ಈ. ಚಂದ್ರಣ್ಣ, ವೃತ್ತಿಪರ ನಿರ್ದೇಶಕರು; ಡಾ॥ ಹೆಚ್.ಎಸ್. ಮಂಜುನಾಥ್, ವೃತ್ತಿಪರ ನಿರ್ದೇಶಕರು; ಶ್ರೀ ಮಂಜುನಾಥ್ ರೇವಣಕರ್, ಪ್ರಭಾರಿ ಪ್ರಧಾನ ವ್ಯವಸ್ಥಾಪಕರು

**ಬ್ಯಾಂಕಿನ ವ್ಯವಸ್ಥಾಪನ ಮಂಡಳಿ ಸದಸ್ಯರು**



ಶ್ರೀ ಐಗೂರು ಸಿ. ಚಂದ್ರಶೇಖರ್, ಅಧ್ಯಕ್ಷರು; ಶ್ರೀ ಬಿ.ಎಸ್. ಪ್ರಕಾಶ್, ನಿರ್ದೇಶಕರು; ಶ್ರೀ ಎಂ.ಜಿ. ರಾಜಶೇಖರಯ್ಯ, ನಿರ್ದೇಶಕರು; ಶ್ರೀ ಜಿ. ನಂಜನಗೌಡರು, ನಿರ್ದೇಶಕರು; ಶ್ರೀ ಬಿ. ಕುಬೇರಪ್ಪ, ನಿರ್ದೇಶಕರು

**ಸಭೆಯ ಕಾರ್ಯ ಕಲಾಪಗಳು :**

1) ಪ್ರಾರ್ಥನೆ 2) ಸ್ವಾಗತ 3) ದೈವಾಧೀನರಾದ ಬ್ಯಾಂಕಿನ ಸದಸ್ಯರಿಗೆ ಸಂತಾಪ ಸೂಚಿಸುವುದು. 4) ಬ್ಯಾಂಕಿನ ಸದಸ್ಯರ ಹಾಗೂ ನೌಕರರ ಪ್ರತಿಭಾವಂತ ಮಕ್ಕಳಿಗೆ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ನೀಡಿ ಸನ್ಮಾನಿಸುವುದು ಹಾಗೂ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಿದ ಕ್ರೀಡಾಪಟುಗಳನ್ನು ಸನ್ಮಾನಿಸುವುದು. 5) 2022-23ನೇ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಕೆಗಳನ್ನು ಓದಿ ರೆಕಾರ್ಡ್ ಮಾಡುವುದು. 6) 2023-24ನೇ ಸಾಲಿನ ಆಡಳಿತ ಮಂಡಳಿಯ ವಾರ್ಷಿಕ ವರದಿಯನ್ನು ಪರಿಶೀಲಿಸುವುದು. 7) 2023-24ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಹಾಗೂ ಆಸ್ತಿ ಜವಾಬ್ದಾರಿ ತಃಖ್ತೆ, ಲಾಭ-ನಷ್ಟ ತಃಖ್ತೆಗಳನ್ನು ಪರಿಶೀಲಿಸಿ ಅಂಗೀಕರಿಸುವುದು. 8) 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿನ ದೋಷಗಳಿಗೆ ಅನುಪಾಲನಾ ವರದಿಯನ್ನು ಪರಿಶೀಲಿಸುವುದು. 9) 2023-24ನೇ ವರ್ಷದ ಆಯವ್ಯಯದಲ್ಲಿನ ಹೆಚ್ಚುವರಿ ಖರ್ಚುಗಳ ಅನುಮೋದನೆ ಹಾಗೂ 2024-25ನೇ ವರ್ಷದ ಆಯವ್ಯಯದ ಮಂಜೂರಾತಿ 10) ನಿಯಮಾನುಸಾರ ಲಾಭವನ್ನು ವಿನಿಯೋಗಿಸುವುದು, ಲಾಭಾಂಶ ಪ್ರಮಾಣವನ್ನು ಅನುಮೋದಿಸುವುದು. 11) ಬ್ಯಾಂಕು ಪಡೆಯಬಹುದಾದ ಸಾಲದ ಮಿತಿಯನ್ನು ನಿರ್ಧರಿಸುವುದು. 12) 2024-25ನೇ ಸಾಲಿಗೆ ಆರ್.ಬಿ.ಐ ಅನುಮತಿ ನೀಡಿದ ಶಾಸನಬದ್ಧ ಲೆಕ್ಕ ಪರಿಶೋಧಕರುಗಳನ್ನು ಅನುಮೋದಿಸುವುದು. 13) ಬ್ಯಾಂಕಿನ ಸಂಚಯನಗಳನ್ನು ಪರಿಶೀಲಿಸಿ, ಅಂಗೀಕರಿಸುವುದು. 14) 2024-25ನೇ ಸಾಲಿನ ಆಡಳಿತ ಮಂಡಳಿ ರೂಪಿಸಿದ ಕಾರ್ಯ ಚಟುವಟಿಕೆಗಳನ್ನು ಅನುಮೋದಿಸುವುದು. 15) 2023-24ನೇ ಸಾಲಿನಲ್ಲಿ ಸದಸ್ಯರಾಗಿ ನೇಮಕಗೊಂಡ ಮತ್ತು ವಿವಿಧ ಕಾರಣಗಳಿಂದ ಸದಸ್ಯತ್ವ ರದ್ದಾಗಿರುವ ವಿವರವನ್ನು ಅಂಗೀಕರಿಸುವುದು. 16) ಆಡಳಿತ ಮಂಡಳಿಯು ನಿಯಮಾನುಸಾರ ರೂಪಿಸಿದ ಠೇವಣಿ/ಸಾಲ ನಿಯಮ/ ಸಿಬ್ಬಂದಿ ಸೇವಾ ನಿಯಮಗಳ ಅನುಮೋದನೆ. 17) ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು. 18) ವಂದನಾರ್ಪಣೆ.

**ವಿಶೇಷ ಸೂಚನೆ :** ಎಲ್ಲಾ ಅರ್ಹ ಸದಸ್ಯರಿಗೆ ವಾರ್ಷಿಕ ಮಹಾಸಭೆಯ ವರದಿ ಪುಸ್ತಕವನ್ನು ಅಂಚೆ ಮೂಲಕ ಈಗಾಗಲೇ ಕಳುಹಿಸಲಾಗಿರುತ್ತದೆ. ಮಾನ್ಯ ಸದಸ್ಯ ಬಾಂಧವರಿಗೆ ವಾರ್ಷಿಕ ಮಹಾಸಭೆಯ ಪುಸ್ತಕವು ಸ್ವೀಕೃತಿಯಾಗದೇ ಇದ್ದಲ್ಲಿ ಪ್ರಕಟಣೆಯೇ ವಾರ್ಷಿಕ ಮಹಾಸಭೆಯ ತಿಳುವಳಿಕೆ ಪತ್ರವೆಂದು ಪರಿಗಣಿಸಿ, ಈ ಮೂಲಕ ಮಹಾಸಭೆಗೆ ಹಾಜರಾಗಲು ವಿನಂತಿಸಲಾಗಿದೆ.

ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ ಇದರ 2023-2024ನೇ ಸಾಲಿನ 50ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ : 14.09.2024ರ ಶನಿವಾರ ಬೆಳಗ್ಗೆ 11.30 ಗಂಟೆಗೆ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನ, ಆರೂಢ ದಾಸೋಹಿ ಶರಣ ಮಾಗನೂರು ಬಸಪ್ಪ ರಸ್ತೆ, ಐಟಿಐ ಕಾಲೇಜು ಎದುರು, ದಾವಣಗೆರೆ. ಇಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀಯುತ ಎಂ.ಬಿ ಸಂಗಮೇಶ್ವರಗೌಡರ ಅಧ್ಯಕ್ಷತೆಯಲ್ಲಿ ಏರ್ಪಡಿಸಿರುತ್ತದೆ. ಆದ್ದರಿಂದ ಬ್ಯಾಂಕಿನ ಸರ್ವ ಸದಸ್ಯರು ಸಕಾಲಕ್ಕೆ ಭಾಗವಹಿಸಿ, ವಾರ್ಷಿಕ ಮಹಾಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ಆಡಳಿತ ಮಂಡಳಿ ಪರವಾಗಿ,
ಸಹಿ/- ಪ್ರಭಾರಿ ಪ್ರಧಾನ ವ್ಯವಸ್ಥಾಪಕರು

# ಬಿಜೆಪಿ ಹಗರಣಗಳ ತನಿಖೆಗೆ 4 ವಾರಗಳ ಗಡುವು

## ತನಿಖೆ ಪೂರ್ಣಗೊಳಿಸಿ ಆರೋಪ ಪಟ್ಟಿ ಸಲ್ಲಿಕೆಗೆ ಪೊಲೀಸ್, ಇಲಾಖೆ ಅಧಿಕಾರಿಗಳಿಗೆ ಸರ್ಕಾರದ ಆದೇಶ

ಬೆಂಗಳೂರು, ಸೆ. 13 - ಬಿಜೆಪಿ ಆಡಳಿತದಲ್ಲಿ ನಡೆದಿರುವ ಹಗರಣಗಳ ತನಿಖೆ ಪೂರ್ಣಗೊಳಿಸಿ ಎರಡರಿಂದ ನಾಲ್ಕು ವಾರದೊಳಗೆ ಆರೋಪ ಪಟ್ಟಿ ಸಲ್ಲಿಸುವಂತೆ ಪೋಲಿಸ್ ಹಾಗೂ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ಸರ್ಕಾರ ಆದೇಶ ಮಾಡಿದೆ.

ಬಿ.ಎಸ್.ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಅಧಿಕಾರಾವಧಿಯಲ್ಲಿ ನಡೆದಿರುವ 21 ಹಗರಣಗಳಿಗೆ ಸಂಬಂಧಿಸಿದಂತೆ ಸರ್ಕಾರ ಮತ್ತು ತನಿಖಾ ಸಂಸ್ಥೆಗಳ ಹಂತದಲ್ಲಿ ಚಾಲ್ತಿಯಲ್ಲಿರುವ ತನಿಖಾ ಪ್ರಗತಿ ಪರಿಶೀಲಿಸಿದ ಗೃಹ ಸಚಿವ ಡಾ.ಜಿ. ಪರಮೇಶ್ವರ್ ನೇತೃತ್ವದ ಸಚಿವರ ಸಮಿತಿ ಈ ಸೂಚನೆ ನೀಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಕಳೆದ ಎರಡು ದಿನಗಳ ಹಿಂದಷ್ಟೇ ಹಗರಣಗಳ ತನಿಖಾ ಪ್ರಗತಿ ಮತ್ತು ಕೈಗೊಂಡ ಕ್ರಮಗಳ ಬಗ್ಗೆ ಪರಿಶೀಲಿನೆಗೆ ನೇಮಕಗೊಂಡಿದ್ದ ಸಚಿವರ ಸಮಿತಿ ಇಂದು ಸಭೆ ಸೇರಿ ಎಲ್ಲಾ ವಿಷಯಗಳಿಗೆ ಸಂಬಂಂಧಿಸಿ ದಂತೆ ತನಿಖಾ ಸಂಸ್ಥೆಗಳ ಮುಖ್ಯಸ್ಥರು ಮತ್ತು ಅಧಿಕಾರಿಗಳಿಂದ ಮಾಹಿತಿ ಪಡೆಯಿತು.

ಕೆಲವು ಪ್ರಕರಣಗಳಿಗೆ ಸಂಬಂಧಿ ಸಿದಂತೆ ತನಿಖೆ ಪೂರ್ಣಗೊಂಡಿದ್ದರೂ ಇದುವರೆಗೆ ಕ್ರಮ ಕೈಗೊಳ್ಳದಿರುವು ದಕ್ಕೆ ಕಾರಣ ಪಡೆಯಲಾಯಿತು.

ಮುಖ್ಯಮಂತ್ರಿಗಳು ಈಗಾಗಲೇ ಹೇಳಿರುವಂತೆ 21 ಭ್ರಷ್ಟಾಚಾರ ಪ್ರಕರಣಗಳ ಬಗ್ಗೆ ನಿಮ್ಮಲ್ಲಿ ದಾಖಲೆಗಳಿರುತ್ತವೆ. ಇಷ್ಟಿದ್ದರೂ ಯಾರ ವಿರುದ್ಧವೂ ಇನ್ನೂ ಏಕೆ ಕ್ರಮ ಕೈಗೊಂಡಿಲ್ಲ? ತನಿಖೆ ಮುಗಿದಿದ್ದರೆ ನೀವೇ ಸಂಬಂಧಪಟ್ಟವರ ವಿರುದ್ಧ ಎಫ್‌ಐಆರ್ ದಾಖಲಿಸಿ ಮುಂದಿನ ಕಾನೂನು ಕ್ರಮ ಕೈಗೊಳ್ಳಿ ಎಂದು ತಿಳಿಸಲಾಗಿದೆ. ಕೆಲವು ಹಗರಣಗಳ ವಿಷಯದಲ್ಲಿ ಸರ್ಕಾರದ ಅನುಮತಿ ಬೇಕಿದ್ದರೆ, ಸಂಪುಟದ ಮುಂದಿಡಿ, ಇನ್ನು ವಿಳಂಬ ಮಾಡಬೇಡಿ ಎಂದು ಸೂಚಿಸಿದ್ದಾರೆ.

ಮುಖ್ಯಮಂತ್ರಿ ಅವರು ನಮ್ಮ ಸಮಿತಿಗೆ ಎರಡು ತಿಂಗಳ ಗಡುವು ನೀಡಿದ್ದಾರೆ, ನಾವು ನಿಮಗೆ ಎರಡರಿಂದ ನಾಲ್ಕು ವಾರಗಳಲ್ಲಿ ಕೆಲವು ಹಗರಣಗಳಿಗೆ ಮೋಕ್ಷ ದೊರಕಿಸಲು ಸಮಯಾವಕಾಶ ನೀಡುತ್ತೇವೆ. ಯಾರು ಎಷ್ಟೇ ದೊಡ್ಡವರಿರಲಿ, ತಪ್ಪು ಮಾಡಿದ್ದರೆ ಅವರನ್ನು ಕಾನೂನು ಚೌಕಟ್ಟಿಗೆ ತನ್ನಿ ಮುಂದೆ ನ್ಯಾಯಾಲಯ ತೀರ್ಮಾನ ಕೈಗೊಳ್ಳುತ್ತದೆ ಎಂದು ತಿಳಿಸಿದ್ದಾರೆ.

ದೇವರಾಜ ಅರಸ್ ಟ್ರಕ್ ಟರ್ಮಿನಲ್ ಭ್ರಷ್ಟಾಚಾರ ಹೊರತುಪಡಿಸಿ ಯಾವುದೇ ತನಿಖೆ ಪೂರ್ಣಗೊಳಿಸಿದ ಮಾಹಿತಿ ಇಲ್ಲ ಎಂದು ತಿಳಿಸಿದ ಗೃಹ ಸಚಿವರು, ಸಂಬಂಧಿಸಿದಂತೆ ಪ್ರತಿಯೊಂದು ಹಗರಣಗಳ ಬಗ್ಗೆಯೂ ಮಾಹಿತಿ ಪಡೆದುಕೊಂಡರು.

ಅದರಲ್ಲೂ ಕೊರೊನಾ ಸಂದರ್ಭದ ಭ್ರಷ್ಟಾಚಾರ, ನೀರಾವರಿ ಮತ್ತು ಲೋಕೋಪಯೋಗಿ ಸೇರಿದಂತೆ ಶೇಕಡ 40 ಕಮಿಷನ್ ಆರೋಪಕ್ಕೆ ಸಂಬಂಧಿಸಿದಂತೆ ತ್ವರಿತ ನಿರ್ಧಾರ ಕೈಗೊಳ್ಳಿ ಎಂದು ಸಭೆ ಸೂಚಿಸಿತು.

ಮಹರ್ಷಿ ವಾಲ್ಮೀಕಿ ನಿಗಮದಲ್ಲಿ ನಡೆದಿರುವ ಹಗರಣದ ಮಾದರಿಯಲ್ಲೇ ಬೋವಿ ಸೇರಿದಂತೆ ವಿವಿಧ ನಿಗಮಗಳಲ್ಲೂ ಭಾರೀ ಭ್ರಷ್ಟಾಚಾರ ನಡೆದಿದೆ. ಅವುಗಳಿಗೆ ಸಂಬಂಧಿಸಿದಂತೆ ಯಾವ ಹಂತದಲ್ಲಿ ತನಿಖೆ ನಡೆದಿದೆ ಎಂದು ಮಾಹಿತಿ ಪಡೆದ ಸಚಿವರ ಸಮಿತಿ, ಇವುಗಳಲ್ಲಿ ಕೆಲವು ಹಗರಣಗಳ ಬಗ್ಗೆ ಇನ್ನು ಎರಡು ವಾರಗಳಲ್ಲಿ ದೂರು ದಾಖಲಿಸಿ ಮುಂದಿನ ಕ್ರಮ ಕೈಗೊಳ್ಳಬೇಕು ಎಂದು ಕಟ್ಟುನಿಟ್ಟಿನ ಆದೇಶ ಮಾಡಿತು.

ವಾಲ್ಮೀಕಿ ಅಭಿವೃದ್ಧಿ ನಿಗಮ ಹಾಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಬಿಡಿ ನಿವೇಶನ ಹಂಚಿಕೆ ಹಗರಣಗಳಿಂದ ಆಡಳಿತದ ವರ್ಚಸ್ಸಿಗೆ ಉಂಟಾಗಿರುವ ಧಕ್ಕೆ ಉಪಶಮನಕ್ಕೆ ಬಿಜೆಪಿ ಆಡಳಿತದಲ್ಲಿ ನಡೆದಿರುವ ಹಗರಣಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸಿ ಆ ಪಕ್ಷದ ಮುಖಂಡರಿಗೆ ಬಿಸಿ ಮುಟ್ಟಿಸಲು ಸರ್ಕಾರ ಇಂತಹ ಕ್ರಮಕ್ಕೆ ಮುಂದಾಗಿದೆ.

ತಮ್ಮ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ನೀಡಿರುವ ಅನುಮತಿ ಸಂಬಂಧ ನ್ಯಾಯಾಲಯದ ತೀರ್ಪು ಹೊರಬರುವ ಮುನ್ನವೇ ಒಂದೆರಡು ಹಗರಣಗಳನ್ನು ಬಯಲು ಮಾಡಿ, ಬಿಜೆಪಿ ಜನಪ್ರತಿನಿಧಿಗಳ ಬಣ್ಣ ಬಯಲು ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದಾಗಿದ್ದಾರೆ.

ಇದರ ಬೆನ್ನಲ್ಲೇ ಗೃಹ ಸಚಿವರ ಅಧ್ಯಕ್ಷತೆಯಲ್ಲಿ ನೇಮಕಗೊಂಡಿದ್ದ ಸಚಿವರ ಸಮಿತಿ ಸಭೆ ಸೇರಿ ಕೆಲವು ಕಠಿಣ ತೀರ್ಮಾನಗಳನ್ನು ಕೈಗೊಂಡಿದೆ.

ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ನಡೆದ ಸಭೆಯಲ್ಲಿ ಸಚಿವರಾದ ಎಚ್.ಕೆ. ಪಾಟೀಲ್, ಕೃಷ್ಣಬೈರೇಗೌಡ, ಪ್ರಿಯಾಂಕ್ ಖರ್ಗೆ ಹಾಗೂ ಸಂತೋಷ್ ಲಾಡ್ ಹಾಜರಿದ್ದರು.



# ಎಸ್ಸೆಸ್ಸೆಲ್ಸಿ ಉತ್ತಮ ಫಲಿತಾಂಶಕ್ಕೆ ಶ್ರಮಿಸಲು ಶಿಕ್ಷಕರಿಗೆ ಕರೆ

### ಹರಪನಹಳ್ಳಿಯಲ್ಲಿನ ವಿಜ್ಞಾನ ಶಿಕ್ಷಕರ ಕಾರ್ಯಾಗಾರದಲ್ಲಿ ಶಾಸಕರಾದ ಎಂ.ಪಿ. ಲತಾ

ಹರಪನಹಳ್ಳಿ, ಸೆ. 13 - ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಸ್ಸೆಸ್ಸೆಲ್ಸಿ ಪರೀಕ್ಷಾ ಫಲಿತಾಂಶ ಕುರಿತು ಜಾಗೃತಿ ನೀಡಿದ್ದಾರೆ. ಆದ್ದರಿಂದ ಉತ್ತಮ ಫಲಿತಾಂಶಕ್ಕೆ ಪ್ರತಿಯೊಬ್ಬ ಶಿಕ್ಷಕರು ಹೆಚ್ಚು ಶ್ರಮವಹಿಸಿಬೇಕು ಎಂದು ಶಾಸಕರಾದ ಲತಾ ಮಲ್ಲಿಕಾರ್ಜುನ ಹೇಳಿದರು.

ಪಟ್ಟಣದ ಸಮತಾ ರೆಸಾರ್ಟ್‌ನಲ್ಲಿ ತಾಲ್ಲೂಕು ಪ್ರೌಢಶಾಲಾ ವಿಜ್ಞಾನ ಶಿಕ್ಷಕರ ಕ್ಲಬ್ ಗುರುವಾರ ಆಯೋಜಿಸಿದ್ದ ಜಿಲ್ಲಾ ಮಟ್ಟದ ವಿಜ್ಞಾನ ಶಿಕ್ಷಕರ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಲೆಕ್ಕ, ಇಂಗ್ಲಿಷ್ ಮಕ್ಕಳಿಗೆ ಕಬ್ಬಿಣದ ಕಡಲೆಯಾಗಿದೆ. ಅದನ್ನು ಸರಳೀಕರಿಸಿ ಮಕ್ಕಳಲ್ಲಿ ಕಲಿಕಾ ಜ್ಞಾನವನ್ನು ವೃದ್ಧಿಸಲು ಪ್ರಯತ್ನಿಸಿ. ಪ್ರತಿ ದಿನ ಒಂದು ಗಂಟೆ ಬೋಧನೆಯನ್ನು ಹೆಚ್ಚು ಮಾಡಿ ಮಕ್ಕಳಲ್ಲಿ ಕಲಿಕಾ ಸಾಮರ್ಥ್ಯ ಹೆಚ್ಚಿಸಿ ಎಂದು ರೆ ನೀಡಿದರು.

ವಿಜ್ಞಾನವನ್ನು ನಮ್ಮ ಪೂರ್ವಿಕರು ತಮ್ಮ ಹಬ್ಬ ಹರಿದಿನಗಳ ಆಚರಣೆಗಳಲ್ಲಿ ಅಳವಡಿಸಿಕೊಂಡಿದ್ದಾರೆ. ಸ್ಮಶಾನದಿಂದ ಆಗಮಿಸುವ ನಮಗೆ ಶುದ್ಧವಾದ ಸ್ನಾನ ಮಾಡುವಂತೆ, ಬಳೆ, ಮಾಂಗಲ್ಯಧಾರಣೆ, ರೀತಿ, ರಿವಾಜುಗಳಲ್ಲಿ ವಿಜ್ಞಾನವನ್ನು ಕಾಣಬಹುದು. ಓದಿನ ಜೊತೆ ಸಾಂಸ್ಕೃತಿಕ ಚಟುವಟಿಕೆ, ಸಂಸ್ಕೃತಿಯನ್ನು ಕಲಿಸಿದ್ದಾರೆ ಎಂದರು.

ಪ್ರಗತಿಪರ ಚಿಂತಕ ಕೋಡಿಹಳ್ಳಿ ಭೀಮಪ್ಪ ಮಾತನಾಡಿ, ಫಲಿತಾಂಶ ಸುಧಾರಣೆಗೆ ಶಿಕ್ಷಕರ ಪರಿಶ್ರಮ ಅತೀ ಹೆಚ್ಚಾಗಿರುವುದು ಅವಶ್ಯವಾಗಿದೆ.

ಸಾಮಾನ್ಯ ಪ್ರಜೆಯನ್ನು ಉತ್ತಮ ನಾಗರೀಕರನ್ನಾಗಿ ಮಾಡುವ ಶಕ್ತಿ ಶಿಕ್ಷಕರಲ್ಲಿದೆ. ರೈತ, ರಾಜಕಾರಣಿ, ಡಾಕ್ಟರ್, ಸಂಶೋಧಕರು, ಇಂಜಿನಿಯರ್‌ಗಳನ್ನು ಮಾಡುವಲ್ಲಿ ಶಿಕ್ಷಕರು ಪ್ರಮುಖ ಪಾತ್ರವಹಿಸುತ್ತಾರೆ. ಸಮಾಜದಲ್ಲಿ ಬದಲಾವಣೆಗಳನ್ನು ಶಿಕ್ಷಕರು ಮಾಡಬಲ್ಲರು. ಟಿ.ವಿ. ಗಳಲ್ಲಿ ಮೂಡುವ ಭವಿಷ್ಯ ಶಾಸ್ತ್ರಕ್ಕೆ ಮಾರು ಹೋಗದೇ ವಿಜ್ಞಾನದ ಶಾಸ್ತ್ರಕ್ಕೆ ಮಹತ್ವ ನೀಡಿ ಜೀವನ ಸಾಗಿಸಿದರೆ ನೆಮ್ಮದಿಯನ್ನು ಕಾಣಬಹುದು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್. ಲೇಪಾಕ್ಷಪ್ಪ ಮಾತನಾಡಿ, ಗುಣಾತ್ಮಕ ಶಿಕ್ಷಣದ ಕಾಳಜಿ ಅವಶ್ಯವಾಗಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಉತ್ತಮವಾಗಿಸಲು 20 ಪಾಯಿಂಟ್ ಪ್ರೋಗ್ರಾಂ ಅಳವಡಿಸಿಕೊಳ್ಳಲಾಗಿದೆ ಎಂದರು.

ವಿಜಯನಗರ ಜಿಲ್ಲೆಯ ಪ್ರೌಢಶಾಲಾ ವಿಜ್ಞಾನ ಶಿಕ್ಷಕರಿಗೆ ರಾಜ್ಯ ಸಂಪನ್ಮೂಲ ಶಿಕ್ಷಕರಾದ ಶ್ರೀನಿವಾಸ, ಶಶಿಕುಮಾರ ಹಾಗೂ ಇತರರು ಒಂದು ದಿನದ ವಿಜ್ಞಾನ ಶಿಕ್ಷಕರ ಕಾರ್ಯಾಗಾರದಲ್ಲಿ ವಿವಿಧ ರೀತಿಯಲ್ಲಿ ಕಲಿಕಾ ಬೋಧನೆಗಳ ಮಜಲುಗಳನ್ನು ವಿವರಿಸಿದರು.

ತಾಲ್ಲೂಕು ಪಂಚಾಯ್ತಿ ಕಾರ್ಯ ನಿರ್ವಾಹಕಾ ಅಧಿಕಾರಿ ಚಂದ್ರಶೇಖರ ವೈ.ಎಚ್. ಮಾತನಾಡಿದರು.

ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ನಾಗರಾಜ, ಪ್ರೌಢಶಾಲಾ ಶಿಕ್ಷಕ ಸಂಘದ ಜಿಲ್ಲಾಧ್ಯಾಕ್ಷ ಎನ್.ಜಿ. ಮನೋಹರ, ತಾಲ್ಲೂಕು ವಿಜ್ಞಾನ ಕ್ಲಬ್ ಅಧ್ಯಕ್ಷ ಯತಿರಾಜ್, ಕೊಟ್ರೇಶ್, ಕೆ.ಎಂ. ಕೊಟ್ರಯ್ಯ, ಶಂಕರನಾಯ್ಕ್, ಬಸವಂತಪ್ಪ, ಜಯ ಮಾಲತೇಶ್, ಶಶಿಕಲಾ, ಕವಿತಾ ಹಾಗೂ ಇತರರು ಭಾಗವಹಿಸಿದ್ದರು.

## ಮಲೇಬೆನ್ನೂರಿನಲ್ಲಿ ಇಂದು ಜಾದೂ ಪ್ರದರ್ಶನ

ನೀರಾವರಿ ಇಲಾಖೆಯ ಮೈದಾನದಲ್ಲಿ ಪ್ರತಿಷ್ಠಾಪಿಸಿರುವ 3ನೇ ವರ್ಷದ ಹಿಂದೂ ಮಹಾಗಣಪತಿ ವೇದಿಕೆಯಲ್ಲಿ ಪಿಡಬ್ಲ್ಯೂಡಿ ಕ್ರಿಕೆಟರ್ಸ್ ವತಿಯಿಂದ ಮಧ್ಯಾಹ್ನ 2 ರಿಂದ ಮಹಿಳೆಯರಿಗಾಗಿ ರಂಗೋಲಿ ಸ್ಪರ್ಧೆ ಮತ್ತು ಸಂಜೆ 5 ರಿಂದ ಬೆಂಗಳೂರಿನ ರವಿ ಅವರಿಂದ ಜಾದೂ ಪ್ರದರ್ಶನ, ನಂತರ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ ಎಂದು ಪಿ.ಆರ್.ರಾಜು ತಿಳಿಸಿದ್ದಾರೆ.

## ಬೆಲೆ ಮಿತಿ ರದ್ದು

**(1ನೇ ಪುಟದಿಂದ)** ಯಲ್ಲಿವೆ. ಮಹಾರಾಷ್ಟ್ರದಲ್ಲಿ ಈರುಳ್ಳಿಯನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ. ಈ ಬಗ್ಗೆ ಮಾತನಾಡಿರುವ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್, ಸರ್ಕಾರದ ಕ್ರಮದಿಂದ ರಫ್ತಿಗೆ ಉತ್ತೇಜನ ಸಿಗಲಿದೆ ಹಾಗೂ ರೈತರ ಆದಾಯ ಹೆಚ್ಚಾಗಲಿದೆ ಎಂದು ಹೇಳಿದ್ದಾರೆ.

# ಇಡಿ ಹೆಸರಿನಲ್ಲಿ ಬೆದರಿಸಿ ಹಣ ವಸೂಲಿ

**(1ನೇ ಪುಟದಿಂದ)** ಮಾಹಿತಿ ಬೇಕಿದ್ದರೆ ಆಧಾರ್ ಕಾರ್ಡ್ ಸಂಖ್ಯೆ ನೀಡುವಂತೆ ವ್ಯಕ್ತಿಗೆ ಅನಾಮಿಕರೊಬ್ಬರು ಗುರುವಾರ ಕರೆ ಮಾಡಿದ್ದರು.

ಅದರಂತೆ ವಾಟ್ಸ್‌ಆಪ್ ಮೂಲಕ ಆಧಾರ್ ಕಾರ್ಡ್ ಪ್ರತಿಯನ್ನು ಕಳಿಸಲಾಗಿತ್ತು. ನಂತರ ಅನಾಮಿಕ ವ್ಯಕ್ತಿ ಮತ್ತೆ ಕರೆ ಮಾಡಿ, ನಿಮ್ಮ ವಿರುದ್ಧ ವಿದೇಶಿ ವಿನಿಮಯ ಉಲ್ಲಂಘನೆ ಕಾಯ್ದೆ ಹಾಗೂ ಅಕ್ರಮ ಹಣ ಕಾಯ್ದೆ ಅನ್ವಯ ಜಾರಿ ನಿರ್ದೇಶನಾಲಯದಲ್ಲಿ ಪ್ರಕರಣಗಳು ದಾಖಲಾಗಿವೆ. ಈ ಹಿನ್ನೆಲೆಯಲ್ಲಿ ತಕ್ಷಣವೇ ಬಂಧಿಸಲಾಗುವುದು. ಇದಕ್ಕಾಗಿ ಮುಂಬೈನ ತಿಲಕ್ ನಗರ ಪೊಲೀಸ್ ಠಾಣೆಗೆ ಬರಬೇಕು ಎಂದು ತಿಳಿಸಿದ.

ಈ ಬಗ್ಗೆ ನಂಬಿಕೆ ಮೂಡಿಸಲು ಜಾರಿ ನಿರ್ದೇಶನಾಲಯದ ಲೆಟರ್ ಹೆಡ್ ಇರುವ ಒಂದು ಪತ್ರವನ್ನೂ ಕಳಿಸಲಾಗಿತ್ತು. ನಂತರ ಅನಾಮಧೇಯ ಸಂಖ್ಯೆಯಿಂದ ವಾಟ್ಸ್‌ಆಪ್ ವಿಡಿಯೋ ಕರೆ ಮಾಡಲಾಗಿತ್ತು. ಇದರಲ್ಲಿ ಪೊಲೀಸ್ ಉಡುಗೆಯಲ್ಲಿದ್ದ ಒಬ್ಬರು ಮಾತನಾಡಿ, ನನ್ನ ಮೇಲಾಧಿಕಾರಿ ಹೇಮರಾಜ್ ಕೋಲಿ ಎಂಬುವವರ ಜೊತೆ ಮಾತನಾಡುವಂತೆ ತಿಳಿಸಿದರು. ನಂತರ ಭ್ರಷ್ಟಾಚಾರ ನಿಗ್ರಹದ ಆಯುಕ್ತ ವಿ.ಜಿ. ಪಾಟೀಲ್ ಎಂದು ಹೇಳಿಕೊಳ್ಳುವವರ ಜೊತೆ ಮಾತನಾಡಿಸಿದರು.

ನೀವು ಅಮಾಯಕರಿದ್ದರೆ ನಾವು ಸಹಾಯ ಮಾಡುತ್ತೇವೆ. ಈ ಬಗ್ಗೆ ನೀವೇ ಒಂದು ದೂರು ಕೊಡಿ, ಎಫ್.ಐ.ಆರ್. ಮಾಡಿಸುತ್ತೇವೆ ಎಂದು ನಂಬಿಸಿದರು. ನಂತರ ಅಕ್ರಮ ಹಣಕ್ಕೆ ಸಂಬಂಧಿಸಿದಂತೆ ರಿಸರ್ವ್ ಬ್ಯಾಂಕ್‌ನವರು ಪರಿಶೀಲಿಸುತ್ತಾರೆ. ನಿಮ್ಮ ಕುಟುಂಬದವರ ಖಾತೆಯಲ್ಲಿರುವ ಎಲ್ಲ ಹಣವನ್ನು ನಮಗೆ ಬ್ಯಾಂಕ್‌ನ ಆರ್.ಟಿ.ಜಿ.ಎಸ್. ಮೂಲಕ ಕಳಿಸಿ.ನೀವು ಅಮಾಯಕರಿದ್ದರೆ ಮೂರು ದಿನಗಳಲ್ಲೇ ನಿಮ್ಮ ಹಣ ವಾಪಸ್ ಬರುತ್ತದೆ ಎಂದು ಹೇಳಿದರು.

ಇದನ್ನು ನಂಬಿದ ವ್ಯಕ್ತಿ, ವಂಚಕರು ತಿಳಿಸಿದ ಎಸ್.ಬಿ.ಐ. ಖಾತೆಯೊಂದಕ್ಕೆ 34 ಲಕ್ಷ ರೂ. ಹಣವನ್ನು ಆರ್.ಟಿ.ಜಿ.ಎಸ್. ಮೂಲಕ ರವಾನಿಸಿದ್ದಾರೆ. ರಾಷ್ಟ್ರೀಯ ಗೌಪ್ಯತಾ ಕಾಯ್ದೆ ಅನ್ವಯ, ನೀವು ಈ ಮಾಹಿತಿಯನ್ನು ಯಾರಿಗೂ ತಿಳಿಸುವಂತಿಲ್ಲ. ತಿಳಿಸಿದರೆ ನಿಮ್ಮ ಜೀವಕ್ಕೆ ತೊಂದರೆಯಾಗುತ್ತದೆ ಎಂದು ವಂಚಕರು ಹೇಳಿದ್ದರು.

ನಂತರ ವ್ಯಕ್ತಿ ತನ್ನ ಪರಿಚಯಸ್ಥರ ಬಳಿ ಈ ಬಗ್ಗೆ ತಿಳಿಸಿದಾಗ, ಇದರಲ್ಲಿ ವಂಚನೆಯಾಗಿದೆ ಎಂಬುದು ಗೊತ್ತಾಗಿದೆ. ನಂತರ ಅವರು ಶುಕ್ರವಾರದಂದು ಪೊಲೀಸರಲ್ಲಿ ಆನ್‌ಲೈನ್ ಮೂಲಕ ದೂರು ದಾಖಲಿಸಿದ್ದಾರೆ. ಈ ಬಗ್ಗೆ ನಗರದ ಸಿ.ಇ.ಎನ್. ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗುತ್ತಿದೆ.

### ತನಿಖಾ ಸಂಸ್ಥೆಗಳ ಹೆಸರಿನ 'ಡಿಜಿಟಲ್ ಅರೆಸ್ಟ್' ನಂಬಬೇಡಿ

ಟ್ರಾಯ್, ಜಾರಿ ನಿರ್ದೇಶನಾಲಯ, ಸಿ.ಬಿ.ಐ., ಇ.ಡಿ., ಐ.ಬಿ. ಇತ್ಯಾದಿ ತನಿಖಾ ಸಂಸ್ಥೆಗಳ ಹೆಸರಿನಲ್ಲಿ ಕರೆ ಮಾಡಿ ಅಕ್ರಮ ಹಣ ಪ್ರಕರಣದಲ್ಲಿ ಸಿಲುಕಿರುವುದಾಗಿ ವಂಚಿಸುವ ಪ್ರಕರಣಗಳು ನಡೆಯುತ್ತಿವೆ. ಕೂಡಲೇ ಬಂಧನ ಮಾಡುತ್ತೇವೆ, ದೆಹಲಿ ಮುಂತಾದ ಕಡೆ ಬರಬೇಕು ಎಂದು ಬೆದರಿಸಲಾಗುತ್ತಿದೆ. ಇಂತಹ ಬೆದರಿಕೆ ಕರೆಗಳನ್ನು ನಂಬಬಾರದು ಎಂದು ಜಿಲ್ಲಾ ಪೊಲೀಸ್ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವಂಚಕರು ತನಿಖಾ ಸಂಸ್ಥೆಗಳ ಹೆಸರಿನ ಲೆಟರ್ ಹೆಡ್ ಮೂಲಕ ಪತ್ರ ಕಳಿಸಿ, ಮೇಲಾಧಿಕಾರಿಗಳ ಜೊತೆ ಮಾತನಾಡುವಂತೆ ತಿಳಿಸುತ್ತಾರೆ. ಸಹಾಯ ಮಾಡುವ ಸೋಗಿನಲ್ಲಿ ಹಣ ಪಡೆಯುತ್ತಾರೆ.

ಈ ವಿಷಯವನ್ನು ಬೇರೆ ಯಾರಿಗಾದರೂ ಹೇಳಿದರೆ ತೊಂದರೆಯಾಗುತ್ತದೆ ಎಂದು ಹೆದರಿಸುತ್ತಾರೆ. ಇಂತಹ ವಂಚನೆಗಳ ಬಗ್ಗೆ ಜಾಗರೂಕರಾಗಿರಬೇಕು. ಅಂತಹ ಕರೆಗಳಿಗೆ ಸ್ಪಂದಿಸಬಾರದು. ಈ ರೀತಿಯ ಕರೆ ಬಂದರೆ ಸ್ಥಳೀಯ ಪೊಲೀಸ್ ಠಾಣೆಗೆ ಈ ಬಗ್ಗೆ ದೂರು ನೀಡಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಹರಿಹರ : ಆಟೋದಲ್ಲಿ ಕಳೆದುಕೊಂಡಿದ್ದ ಆಭರಣಗಳ ಪತ್ತೆ

ದಾವಣಗೆರೆ, ಸೆ. 13 - ಮಹಿಳೆಯೊಬ್ಬರು ಆಟೋದಲ್ಲಿ ಕಳೆದುಕೊಂಡಿದ್ದ ಆಭರಣಗಳನ್ನು ಪತ್ತೆ ಹಚ್ಚಿ ಮರಳಿ ಕೊಡಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಹರಿಹರದ ಹಳ್ಳದಕೇರಿ ವಾಸಿ ನವೀನತಾಜ್ ಸೆ.10ರಂದು ಮಧ್ಯಾಹ್ನ ಭಾಷಾ ನಗರದ ಬಳಿ ಆಟೋ ಹತ್ತಿ, ಇಸ್ಲಾಂ ಪೇಟೆ ಮಸೀದಿ ಬಳಿ ಆಭರಣಗಳಿರುವ ವ್ಯಾನಿಟಿ ಬ್ಯಾಗ್ ಬಿಟ್ಟು ಆಟೋ ಇಳಿದಿದ್ದರು.

ತನಿಖೆ ನಡೆಸಿದ ಪೊಲೀಸರು, ಸಿಸಿ ಟಿವಿಗಳನ್ನು ಪರಿಶೀಲಿಸಿ ದಸ್ತಗಿರಿ ಎಂಬುವವರ ಆಟೋ ಪತ್ತೆ ಮಾಡಿ, ಚಾಲಕನನ್ನು ಠಾಣೆಗೆ ಕರೆಸಿದಾಗ ಅವರು ಪ್ರಾಮಾಣಿಕವಾಗಿ ಆಭರಣಗಳನ್ನು ಮರಳಿಸಿದ್ದಾರೆ.

ಈ ವೇಳೆ ಆಟೋ ಚಾಲಕನನ್ನು ಸನ್ಮಾನಿಸಲಾಗಿದೆ. ಆಟೋ ಪತ್ತೆ ಕಾರ್ಯ ದಲ್ಲಿ ಬಸವನಗರ ಪೊಲೀಸ್ ಠಾಣೆ ಪೊಲೀಸ್ ನಿರೀಕ್ಷಕ ಗುರುಬಸವರಾಜ್ ಮಾರ್ಗದರ್ಶನದಲ್ಲಿ ಸಿಬ್ಬಂದಿಯವರಾದ ಫಕೃದ್ದೀನ್ ಅಲಿ, ಸುರೇಶ್ ಉಪಸ್ಥಿತರಿದ್ದರು.


# ವೈಕುಂಠ ಸಮಾರಾಧನೆ ಆಹ್ವಾನ



ನಮ್ಮ ಪೂಜ್ಯ ತಾಯಿಯವರಾದ

**ಶ್ರೀಮತಿ ಮನ್ನೆ ಸತ್ಯವತಿ**

ಇವರು ದಿನಾಂಕ : 04.09.2024ನೇ ಬುಧವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಆ ಪ್ರಯುಕ್ತ ಮೃತರ ಆತ್ಮ ಸದ್ಗತಿಗಾಗಿ

**"ವೈಕುಂಠ ಸಮಾರಾಧನೆ"ಯನ್ನು**

ದಿನಾಂಕ : 14.09.2024ನೇ ಶನಿವಾರ ಮಧ್ಯಾಹ್ನ 11.30ಕ್ಕೆ

ಕಮ್ಮವಾರಿ ಸಮುದಾಯ ಭವನ, ದಾವಣಗೆರೆಯಲ್ಲಿ ಜರುಗಲಿರುವುದು.

ಆ ಪ್ರಯುಕ್ತ ತಾವೆಲ್ಲರೂ ಈ ಕಾರ್ಯಕ್ರಮಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ಆಪೇಕ್ಷಿಸುವ...

ಇಂತಿ ದುಃಖತಪ್ತರು :

ಮನ್ನೆ ನಾಗೇಶ್ವರ ರಾವ್, ಮನ್ನೆ ರಂಗರಾವ್, ಮನ್ನೆ ಸೂರ್ಯಪ್ರಭಾಕರ್ ರಾವ್

ಮನ್ನೆ ಗೋಪಿಶಂಕರ್, ಸಿ. ಸರಸ್ವತಿ, ಸಿ.ಹೆಚ್. ರಾಮಲಕ್ಷ್ಮೀ


ಫೋ. : 99169 59799, 78926 67015, 97384 62378

ಭಾಗ್ಯರಂಗ ಚಿಟ್ಸ್ ಪ್ರೈ ಲಿ., ದಾವಣಗೆರೆ.

ಶ್ರೀ ಲಕ್ಷ್ಮೀ ಗಣೇಶ ಆಟೋಮೊಬೈಲ್ಸ್, ದಾವಣಗೆರೆ.



# ಭಾವಪೂರ್ಣ ಶ್ರದ್ಧಾಂಜಲಿ



ನಮ್ಮ ದೇವಸ್ಥಾನದ ಸಮಿತಿಯ ಉಪಾಧ್ಯಕ್ಷರೂ, ಹಿರಿಯ ವರ್ತಕರೂ, ಸಾಮಾಜಿಕ ಸೇವಾ ಕಾರ್ಯಕರ್ತರೂ ಆದ

**ಶ್ರೀ ಬಿ.ವಿ. ಗಂಗಪ್ಪಶೆಟ್ಟಿ** ಅವರು ದಿನಾಂಕ 13.09.2024ರಂದು ನಿಧನರಾಗಿದ್ದು, ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.

ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಅಧ್ಯಕ್ಷರು ಮತ್ತು ಪದಾಧಿಕಾರಿಗಳು**

**ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನ, ಶ್ರೀ ವಿನಾಯಕ ಸೇವಾ ಸಮಿತಿ**

ಶ್ರೀ ಡಿ. ದೇವರಾಜ ಅರಸು ಬಡಾವಣೆ, 'ಎ' ಬ್ಲಾಕ್ ದಾವಣಗೆರೆ.


## ಪೋರ್ಟ್‌ಬ್ಲೇರ್ ಇನ್ನು ಶ್ರೀವಿಜಯಪುರಂ

ಪೋರ್ಟ್ ಬ್ಲೇರ್, ಸೆ. 13 - ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ರಾಜಧಾನಿ ಪೋರ್ಟ್ ಬ್ಲೇರ್ ಹೆಸರನ್ನು ಶ್ರೀ ವಿಜಯಪುರಂ ಎಂದು ಬದಲಿಸಲಾಗಿದೆ. ಹೆಸರು ಬದಲಾವಣೆ ಸ್ವಾಗತಿಸಿರುವ ಅಂಡಮಾನ್ ಮತ್ತು ನಿಕೋಬಾರ್ ಬಿಜೆಪಿ ಸಂಸದ ಬಿಷ್ಣು ಪಾದ ರೇ, ಪೋರ್ಟ್ ಬ್ಲೇರ್ ಎಂಬುದು ಬ್ರಿಟಿಷರ ಗುಲಾಮಗಿರಿ ಕಾಲವನ್ನು ನೆನಪಿಸುತ್ತದೆ. ಹೀಗಾಗಿ ಹೆಸರು ಬದಲಾವಣೆ ಸ್ವಾಗತಾರ್ಹ ಎಂದಿದ್ದಾರೆ. ಆದರೆ ಹೆಸರು ಬದಲಾವಣೆಗೆ ಆಕ್ಷೇಪಿಸಿರುವ ಅಂಡಮಾನ್ ಮತ್ತು ನಿಕೋಬಾರ್ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಟಿ.ಎಸ್.ಜಿ. ಭಾಸ್ಕರ್, ಹೆಸರು ಬದಲಾವಣೆಗೆ ಮುಂಚೆ ಸರ್ಕಾರ ಸ್ಥಳೀಯ ಜನರ ಜೊತೆ ಚರ್ಚಿಸಿಲ್ಲ ಎಂದಿದ್ದಾರೆ. ಇದಕ್ಕೂ ಮುಂಚೆ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು ಹೆಸರು ಬದಲಾವಣೆ ಮಾಡಿರುವುದನ್ನು ಪ್ರಕಟಿಸಿದ್ದರು.

## ನಂದಿನಿ ಹಾಲಿನ ದರ ಮತ್ತೆ ಹೆಚ್ಚಳ

**(1ನೇ ಪುಟದಿಂದ)** ನಂದಿನ ಹಾಲಿನ ದರ ಹೆಚ್ಚಳ ಮಾಡುತ್ತೇವೆ. ಈ ಹೆಚ್ಚಳ ಮಾಡಿದ ಹಾಲಿನ ದರ ನೇರವಾಗಿ ರೈತರಿಗೆ ಹೋಗಬೇಕು ಎಂದರು.

ನಂದಿನ ಹಾಲಿನ ದರವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ. ಹಾಲಿನ ದರ ಹೆಚ್ಚಳ ಸಂಬಂಧ ಸಭೆ ಕರೆದು ಮಾತುಕತೆ ನಡೆಸಿ ಹೆಚ್ಚಳ ಮಾಡೋಣ ಎಂದವರು ಹೇಳಿದ್ದಾರೆ.

## ಸಿ.ಬಿ. ವೆಂಕಟಪ್ಪ ನಿಧನ



ದಾವಣಗೆರೆ ಎಸ್.ಎಸ್. ಲೇ ಔಟ್ 'ಎ' ಬ್ಲಾಕ್, ಬಾಪೂಜಿ ಎಂ.ಬಿ.ಎ. ಕಾಲೇಜು ಎದುರು ಮನೆ ಸಂಖ್ಯೆ 1928/99ರ ವಾಸಿ

**ಶ್ರೀ ಸಿ.ಬಿ. ವೆಂಕಟಪ್ಪ**

ಅವರು ದಿನಾಂಕ 13-9-2024ರ ಶುಕ್ರವಾರ ಮಧ್ಯಾಹ್ನ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ ಸುಮಾರು 91 ವರ್ಷ ವಯಸ್ಸಾಗಿತ್ತು. ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 14-9-2024ರ ಶನಿವಾರ ಬೆಳಿಗ್ಗೆ 11.30ಕ್ಕೆ ಗಾಂಧಿನಗರದ ಬಳಿಯ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ

ಮಕ್ಕಳಾದ : ✦ ಸಿ.ವಿ. ರವೀಂದ್ರಬಾಬು ಹಾಗೂ ಕುಟುಂಬದವರು

✦ ಸಿ.ವಿ. ನರೇಂದ್ರಬಾಬು ಹಾಗೂ ಕುಟುಂಬದವರು

✦ ಚಂದ್ರಕಲಾ ಹಾಗೂ ಕುಟುಂಬದವರು

ಅಳಿಯಂದಿರಾದ : ✦ ರವಿ ✦ ಮಾರುತಿ

✦ ಸಿ.ಒ. ರವಿಕುಮಾರ್ ಹಾಗೂ ಕುಟುಂಬದವರು

✦ ಸಿ.ಎ. ಗಿರೀಶ್ ಹಾಗೂ ಕುಟುಂಬದವರು

✦ ಎ. ನಾಗರಾಜ್ ಹಾಗೂ ಸಹೋದರರು ಮತ್ತು ಕುಟುಂಬದವರು


ಹಾಗೂ ರೆಡ್ಡಿಹಳ್ಳಿ ವಂಶಸ್ಥರು

## ನಗರದಲ್ಲಿ ಇಂದು ಶಿವಗೋಷ್ಠಿ

ಸಾದರ ನೌಕರರ ಬಳಗದ ಸಹಯೋಗದಲ್ಲಿ ಶಿವಗೋಷ್ಠಿ - 309 ಹಾಗೂ ಸ್ಮರಣೆ-83 ಮಾಸಿಕ ಕಾರ್ಯಕ್ರಮವು ಇಂದು ಸಂಜೆ 6ಕ್ಕೆ ಶ್ರೀ ಮಾಗನೂರು ಬಸಪ್ಪ ಸಭಾಂಗಣದಲ್ಲಿ ನೆರವೇರಲಿದೆ.

ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್‌ನ ಗೌರವ ಕಾರ್ಯದರ್ಶಿ ಎಂ.ಬಿ. ಸಂಗಮೇಶ್ವರಗೌಡ್ರು ಅಧ್ಯಕ್ಷತೆ ವಹಿಸುವರು. ಡಾ. ಅನಿತಾ ಹೆಚ್. ದೊಡ್ಡಗೌಡರ್, ನಾಗರಾಜ ಸಿರಿಗೆರೆ ಉಪನ್ಯಾಸ ನೀಡುವರು.

## ನಾಗೇಂದ್ರಪ್ಪ ನಿಧನ



ದಾವಣಗೆರೆ ಸಿಟಿ, ನಿಟ್ಟುವಳ್ಳಿ ಹೊಸ ಬಡಾವಣೆ ವಾಸಿ ನಾಗೇಂದ್ರಪ್ಪ (53) ಇವರು ದಿನಾಂಕ : 13.9.2024ರ ಶುಕ್ರವಾರ ರಾತ್ರಿ 8.30ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರಿ, ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 14.9.2024ರ ಶನಿವಾರ ಮಧ್ಯಾಹ್ನ 3ಕ್ಕೆ ಭಗತ್‌ಸಿಂಗ್ ನಗರದ ಆರ್.ಹೆಚ್. ಬೃಂದಾವನದಲ್ಲಿ ನೆರವೇರಲಿದೆ.

## ಯಲವಟ್ಟಿಯಲ್ಲಿ ಇಂದು ಭಕ್ತಿ ಸಮರ್ಪಣೆ



ಸಿರಿಗೆರೆಯಲ್ಲಿ ಇದೇ ದಿನಾಂಕ 24 ರಂದು ಜರುಗುವ ಲಿಂಗೈಕ್ಯ ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮೀಜಿ ಅವರ 32ನೇ ಶ್ರದ್ಧಾಂಜಲಿ ಸಮಾರಂಭದ ದಾಸೋಹಕ್ಕೆ ಹರಿಹರ ತಾಲ್ಲೂಕಿನಿಂದ ಭಕ್ತಿ ಸಮರ್ಪಣೆ ಸಮಾರಂಭವನ್ನು ಮಲೇಬೆನ್ನೂರು ಸಮೀಪದ ಯಲವಟ್ಟಿ ಗ್ರಾಮದಲ್ಲಿ ಇಂದು ಬೆಳಿಗ್ಗೆ 11.30ಕ್ಕೆ ಹಮ್ಮಿಕೊಳ್ಳಲಾಗಿದೆ ಎಂದು ಹರಿಹರ ತಾಲ್ಲೂಕು ಸಾಧು ವೀರಶೈವ ಸಮಾಜದ ಕಾರ್ಯದರ್ಶಿ ನಿಟ್ಟೂರಿನ ಇಟಗಿ ಶಿವಣ್ಣ ತಿಳಿಸಿದ್ದಾರೆ.

ದಿವ್ಯ ಸಾನ್ನಿಧ್ಯ : ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಮತ್ತು ಯಲವಟ್ಟಿಯ ಗುರುಸಿದ್ಧಾಶ್ರಮದ ಶ್ರೀ ಯೋಗಾನಂದ ಸ್ವಾಮೀಜಿ.

ಅಧ್ಯಕ್ಷತೆ : ಅಮರಾವತಿ ಮಹಾದೇವಪ್ಪ ಗೌಡ್ರು, ಮುಖ್ಯ ಅತಿಥಿಗಳು : ಎಸ್.ಎಸ್. ಮಲ್ಲಿಕಾರ್ಜುನ್, ಡಾ. ಪ್ರಭಾ ಮಲ್ಲಿಕಾರ್ಜುನ್, ಬಿ.ಪಿ.ಹರೀಶ್ ಸೇರಿದಂತೆ ಇತರರು.

## ಜಗಳೂರಿನಲ್ಲಿಂದು ವಿದ್ಯುತ್ ವ್ಯತ್ಯಯ

ಜಗಳೂರು ಪಟ್ಟಣ ಮತ್ತು ಎಲ್ಲಾ ಗ್ರಾಮಗಳ ಎನ್‌ಜೆವೈ ಮಾರ್ಗಗಳು ಮತ್ತು ನೀರಾವರಿ ಪಂಪ್ ಸೆಟ್ ಮಾರ್ಗಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಎಇಇ ಸುಧಾಮಣಿ ತಿಳಿಸಿದ್ದಾರೆ.

### ಭದ್ರಾ ಜಲಾಶಯ

ನೀರಿನ ಮಟ್ಟ : 186
ಒಳ ಹರಿವು : 7653 ಕ್ಯೂಸೆಕ್ಸ್
ಹೊರ ಹರಿವು : 6449 ಕ್ಯೂಸೆಕ್ಸ್
ಕಳೆದ ವರ್ಷ : 161 ಅಡಿ 4 ಇಂಚು


ಸಹಕಾರಂ ಗೆಲ್ಗೆ - ಸಹಕಾರಂ ಬಾಳ್ಗೆ



# ಶ್ರೀ ಶಿವಕುಮಾರಸ್ವಾಮಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,

# 1660/47-1, 1ನೇ ಮಹಡಿ, 12ನೇ ಕ್ರಾಸ್, ತರಳಬಾಳು ಬಡಾವಣೆ, ವಿದ್ಯಾನಗರ ದಾವಣಗೆರೆ - 577 005. ಫೋನ್ : 263129.



ಶ್ರೀ ಶಿವಶಂಕರಸ್ವಾಮಿ
ಅಧ್ಯಕ್ಷರು, ಮೊ :9980140532

ಸಹಕಾರಂ ಗೆಲ್ಗೆ



ಶ್ರೀ ಎಸ್.ಕೆ. ಕೊಟ್ರೇಶ್
ಉಪಾಧ್ಯಕ್ಷರು, ಮೊ : 9353686554



ಶ್ರೀ ಎನ್. ಪರಶುರಾಮನಗೌಡರು, ಮಾಜಿ ಅಧ್ಯಕ್ಷರು, ಹಾಲಿ ನಿರ್ದೇಶಕರು, ಮೊ : 9844056946
ಶ್ರೀ ಜಿ.ಕರಿಬಸಪ್ಪ, ಮಾಜಿ ಅಧ್ಯಕ್ಷರು ಹಾಲಿ ನಿರ್ದೇಶಕರು, ಮೊ : 9480343260
ಶ್ರೀ ಎಸ್.ಜಿ.ಮಲ್ಲಿಕಾರ್ಜುನ ಬಾಬು, ಮಾಜಿ ಅಧ್ಯಕ್ಷರು, ಹಾಲಿ ನಿರ್ದೇಶಕರು, ಮೊ : 9448415188
ಶ್ರೀ ಬಿ.ಎ. ಮುರುಗೇಶ್, ಮಾಜಿ ಅಧ್ಯಕ್ಷರು, ಹಾಲಿ ನಿರ್ದೇಶಕರು, ಮೊ :9845190339
ಶ್ರೀ ಕುಬೇಂದ್ರಪ್ಪ, ಮಾಜಿ ಉಪಾಧ್ಯಕ್ಷರು, ಹಾಲಿ ನಿರ್ದೇಶಕರು, ಮೊ : 9448697994



ಶ್ರೀ ಎಂ. ಜಯಪ್ಪ, ನಿರ್ದೇಶಕರು, ಮೊ : 9945542704
ಶ್ರೀ ಎನ್. ಲಕ್ಷ್ಮಣ್ ನಾಯ್ಕ, ಮಾಜಿ ಉಪಾಧ್ಯಕ್ಷರು, ಹಾಲಿ ನಿರ್ದೇಶಕರು, ಮೊ : 9986353153
ಶ್ರೀ ಆರ್. ಅರವಿಂದ, ನಿರ್ದೇಶಕರು, 9916243250
ಶ್ರೀಮತಿ ಶಾರದಮ್ಮ, ನಿರ್ದೇಶಕರು, 7892233942
ಶ್ರೀಮತಿ ಸಿ.ಓ. ವಿನೋದಮ್ಮ, ನಿರ್ದೇಶಕರು, 9945185965

## 23ನೇ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯ ನೋಟಿಸ್

ಸಂಘದ ಎರಡು ವರ್ಷಗಳ
**ಪ್ರಗತಿಯ ಪಕ್ಷಿನೋಟ**

| ಕ್ರ.ಸಂ. | ವಿವರಗಳು | 2022-23 | 2023-24 |
|---|---|---|---|
| 01) | ಸದಸ್ಯರು | 1,471 | 1,430 |
| 02) | ಷೇರು ಬಂಡವಾಳ | 33,29,100 | 32,97,600 |
| 03) | ಠೇವಣಿಗಳು | 1,30,86,080 | 1,41,07,932 |
| 04) | ಸಾಲಗಳು | 1,50,49,884 | 1,65,74,364 |
| 05) | ಲಾಭ | 8,49,634 | 11,95,080 |
| 06) | ಡಿವಿಡೆಂಡ್ | 10% | 10% |
| 07) | ಲೆಕ್ಕ ಪರಿಶೋಧಕ ವರ್ಗ | "ಬಿ" | "ಬಿ" |


ಮಾನ್ಯ ಷೇರುದಾರರಿಗೆ ಊಟದ ವ್ಯವಸ್ಥೆ ಇರುತ್ತದೆ.

ನಮ್ಮ ಸೊಸೈಟಿಯ 2023-24ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ : 15.09.2024ರಂದು ಭಾನುವಾರ ಬೆಳಿಗ್ಗೆ 11.00 ಗಂಟೆಗೆ ಸಂಘದ ಅಧ್ಯಕ್ಷರಾದ ಶ್ರೀ ಶಿವಶಂಕರಸ್ವಾಮಿ ಇವರ ಅಧ್ಯಕ್ಷತೆಯಲ್ಲಿ ಶ್ರೀ ಮಾಕನೂರು ಮಲ್ಲೇಶಪ್ಪ ಶಿಕ್ಷಣ ಮಹಾವಿದ್ಯಾಲಯ, ಅನುಭವ ಮಂಟಪ ಆವರಣ, ಹದಡಿ ರಸ್ತೆ, ದಾವಣಗೆರೆಯಲ್ಲಿ ಏರ್ಪಡಿಸಲಾಗಿದೆ. ಆದ್ದರಿಂದ ಎಲ್ಲರೂ ಸಭೆಗೆ ಹಾಜರಾಗಿ ಹಾಗೂ ಹಾಜರಾತಿ ಪುಸ್ತಕಕ್ಕೆ ಸಹಿ ಮಾಡಲು ಈ ಮೂಲಕ ವಿನಂತಿಸಿದೆ.

ಕಾರ್ಯಕಾರಿ ಮಂಡಳಿ ಅನುಮತಿ ಮೇರೆಗೆ
ಸಹಿ/- ಎನ್.ಜಿ. ನಾಗರಾಜ್, ಕಾರ್ಯದರ್ಶಿ

ವಿ.ಸೂ. : ಈಗಾಗಲೇ ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಸಭೆಗೆ ಆಗಮಿಸಲು ವಿನಂತಿಸಲಾಗಿದೆ.


## ದ್ವಿತೀಯ ವರ್ಷದ ಪುಣ್ಯಸ್ಮರಣೆ



ಜನನ : 12.6.1937 ನಿಧನ : 14.9.2022

### ದಿ|| ಶ್ರೀ ಕೆ.ಎಂ. ಹೊಳಿಯಪ್ಪ

ಸಂಸ್ಥಾಪಕ ಟ್ರಸ್ಟಿಗಳು ಮತ್ತು ಉಪಾಧ್ಯಕ್ಷರು, ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್ (ರಿ.)

ನೀವು ಶಿವೈಕ್ಯರಾಗಿ ಇಂದಿಗೆ ಎರಡು ವರ್ಷಗಳಾದವು. ನಿಮ್ಮ ಪ್ರೀತಿ, ವಾತ್ಸಲ್ಯ, ಆದರ್ಶ, ಶಿಸ್ತು, ಪ್ರಾಮಾಣಿಕತೆ ನಮಗೆಲ್ಲಾ ದಾರಿದೀಪವಾಗಿದೆ. ಪರಮಾತ್ಮನು ನಿಮ್ಮ ಪವಿತ್ರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿರುವ...

ಪತ್ನಿ : ಶ್ರೀಮತಿ ಕೆ.ಎಂ. ಸರೋಜಮ್ಮ
ಪುತ್ರ : ಡಾ|| ಹೆಚ್.ಬಿ. ಮೋಹನ್, ಶ್ರೀಮತಿ ಚೈತ್ರಾ ಮೋಹನ್, ಗಣೇಶ್ ಕೆ.ಎಂ.

**ಧನ್ವಂತರಿ ಆಯುರ್ವೇದಿಕ್ ಕ್ಲಿನಿಕ್ & ಪಂಚಕರ್ಮ ಸೆಂಟರ್**
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ-04.

|| ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸೀದಂತು || || ಶ್ರೀ ಬಾತಿ ಸಿದ್ದೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ

ದಾವಣಗೆರೆ ವಾಸಿಗಳಾದ
ಶ್ರೀಮತಿ ಪ್ರಮೀಳಾ, ಭಿಕ್ಷಾವರ್ತಿ ಮಠದ ಶ್ರೀ ಶಿವಾನಂದಯ್ಯ ಸ್ವಾಮಿ ಮತ್ತು ಮಕ್ಕಳು ಇವರು ಮಾಡುವ ವಿಜ್ಞಾಪನೆಗಳು.




ಜನನ : 01.05.1976 ನಿಧನ : 06.09.2024

ದಿನಾಂಕ 06.09.2024ನೇ ಶುಕ್ರವಾರ ಸಂಜೆ 5.30ಕ್ಕೆ ನನ್ನ ಮಗನಾದ **ಶ್ರೀ ಹೆಚ್.ಎಂ. ಸಿದ್ದೇಶ್** ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ 14.09.2024ನೇ ಶನಿವಾರ ಮಧ್ಯಾಹ್ನ12ಕ್ಕೆ ಮೃತರ ಸ್ವಗೃಹ ವಿನೋಬನಗರ, ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಶ್ರೀಮತಿ ಪ್ರಮೀಳಾ ಶ್ರೀ ಶಿವಾನಂದಯ್ಯ ಸ್ವಾಮಿ ಮತ್ತು ಮಕ್ಕಳು ಭಿಕ್ಷಾವರ್ತಿ ಮಠದ ವಂಶಸ್ಥರು, ಚಿಂದಿ ಮಠದ ವಂಶಸ್ಥರು ಹಾಗೂ ಬಂಧು ಮಿತ್ರರು. ಮೊ : 98446 62042

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಬೋರಗೊಂಡನಹಳ್ಳಿ ಗ್ರಾಮದ ತುಂಬಿಗೆರೆ ಹಾಲಪ್ಪ ನಿಧನ



ದಾವಣಗೆರೆ ತಾಲ್ಲೂಕಿನ ಬೋರಗೊಂಡನಹಳ್ಳಿ ಗ್ರಾಮದ ವಾಸಿ **ತುಂಬಿಗೆರೆ ಹಾಲಪ್ಪ** (72 ವರ್ಷ) ಇವರು ದಿನಾಂಕ 13.09.2024 ರ ಶುಕ್ರವಾರ ಮಧ್ಯಾಹ್ನ 1:45ಕ್ಕೆ ನಿಧನರಾದರು. ಪತ್ನಿಯರು, ಓರ್ವ ಪುತ್ರ, ಮೂವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 14.09.2024ರ ಶನಿವಾರ ಬೆಳಿಗ್ಗೆ 11:30ಕ್ಕೆ ಅವರ ಸ್ವಗ್ರಾಮ ಬೋರಗೊಂಡನಹಳ್ಳಿಯ ಅವರ ಜಮೀನಿನಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬದವರು

## ಚಿರಸ್ಮರಣೆ




### ದಿ|| ಕೆ.ಹೆಚ್.ಸಂಜೀವಪ್ಪನವರು ಮತ್ತು ದಿ|| ಶ್ರೀಮತಿ ಸರೋಜಿನಿ ಸಂಜೀವಪ್ಪನವರು

ನೀವು ನಮ್ಮನ್ನಗಲಿ ಇಂದಿಗೆ 31 ವರ್ಷಗಳಾದವು,
ಇಂದಿಗೂ ನಿಮ್ಮ ನೆನಪು ನಮಗೆ ಬೆಳಕಾಗಿ,
ನಿಮ್ಮ ಪರಿಶ್ರಮ ನಮ್ಮ ಸುಖವಾಗಿ,
ನಿಮ್ಮ ಆಶೀರ್ವಾದ-ಹರಕೆ ನಮ್ಮನ್ನು, ನಿಮ್ಮ ಈ ಮನೆಯನ್ನು,
ಕುಟುಂಬವನ್ನು ಕಾಪಾಡುತ್ತಿದೆ ಹಾಗೂ
ನಿಮ್ಮ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,
ಮಕ್ಕಳು, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು
ಹಾಗೂ ಬಂಧು-ಮಿತ್ರರು, ದಾವಣಗೆರೆ.

ಓಂ ಶ್ರೀ ಗುರು ಬಸವಲಿಂಗಾಯ ನಮಃ

## ಚಿರಸ್ಮರಣೆ



ಜನನ : 25.04.1946
ಲಿಂಗೈಕ್ಯ : 14.09.2021

ಉಸಿರು ಹೋದರೂ ಹೆಸರು ಉಳಿಸಿದ

### ಶರಣ ಲಿಂ. ಶ್ರೀ ದೇವಿಗೆರೆ ವೀರಭದ್ರಪ್ಪನವರು

ದೇವಿಗೆರೆ ಮನೆತನದ ಹಿರಿಯರು ಮತ್ತು ಬಸವ ತತ್ವದ ಅದಮ್ಯ ಪರಿಪಾಲಕರು
(ಮಾಲೀಕರು, ದೇವಿಗೆರೆ ಬ್ರದರ್ಸ್)

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದರೂ. ನಿಮ್ಮ ನೆನಪು ಸದಾ ಹಚ್ಚ ಹಸಿರಾಗಿದ್ದು, ನಿಮ್ಮ ಪ್ರೀತಿ - ವಾತ್ಸಲ್ಯ - ಆದರ್ಶ - ಶಿಸ್ತು - ಪ್ರಾಮಾಣಿಕತೆ ಮತ್ತು ಶ್ರಮದ ಕಾಯಕತ್ವವು ನಮಗೆಲ್ಲಾ ಆದರ್ಶವಾಗಿವೆ. ನೀವು ತೋರಿದ ಸನ್ಮಾರ್ಗದಲ್ಲಿ ಮುನ್ನಡೆಯುತ್ತಿದ್ದೇವೆ. ಪರಮಾತ್ಮನು ನಿಮ್ಮ ಪವಿತ್ರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ದುಃಖತಪ್ತರು :
ಮೃತರ ತಾಯಿ : ಶ್ರೀಮತಿ ರತ್ನಮ್ಮ ದೇವಿಗೆರೆ ಶಿವರುದ್ರಪ್ಪ ಮತ್ತು ಮಕ್ಕಳು
ಮೃತರ ಧರ್ಮಪತ್ನಿ : ದೇವಿಗೆರೆ ಶ್ರೀಮತಿ ಮೀನಾಕ್ಷಮ್ಮ ವೀರಭದ್ರಪ್ಪ ಮತ್ತು ಮಕ್ಕಳು
ಸೊಸೆಯಂದಿರು, ಮೊಮ್ಮಕ್ಕಳು, ಅಳಿಯಂದಿರು, ದೇವಿಗೆರೆ ಸಹೋದರರು, ದೇವಿಗೆರೆ ವಂಶಸ್ಥರು, ಸಿಬ್ಬಂದಿ ವರ್ಗ, ದೇವಿಗೆರೆ ಬ್ರದರ್ಸ್ ದಾವಣಗೆರೆ, ಬಸವ ಬಳಗ ಸದಸ್ಯರು ಹಾಗು ಬಂಧು-ಮಿತ್ರರು.


# ಸನ್ಮತಿ ಸೌಹಾರ್ದ ಸಹಕಾರಿ ಸಂಘ ನಿಯಮಿತ

ನಂ. 712, ಮೊದಲನೇ ಮಹಡಿ, ಮಂಡಿಪೇಟೆ, ದಾವಣಗೆರೆ-577 001.

## ಏಳನೇ ಸಾಲಿನ ವಾರ್ಷಿಕ ಮಹಾಸಭೆಯ ಸೂಚನೆಗಳು

ಸನ್ಮತಿ ಸೌಹಾರ್ದ ಸಹಕಾರಿ ಸಂಘ ನಿ., ದಾವಣಗೆರೆ ಇದರ 2023-2024ನೇ ಸಾಲಿನ 7ನೇ ವಾರ್ಷಿಕ ಮಹಾಸಭೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಟಿ.ಎಂ. ಪಾಲಾಕ್ಷ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 14.09.2024ನೇ ಶನಿವಾರ ಬೆಳಿಗ್ಗೆ 11.30 ಗಂಟೆಗೆ 'ದಿ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಸಮುದಾಯ ಭವನ', ಎಂ.ಸಿ.ಸಿ. ಎ ಬ್ಲಾಕ್, ದಾವಣಗೆರೆಯಲ್ಲಿ ಏರ್ಪಡಿಸಲಾಗಿದೆ. ಈಗಾಗಲೇ ಅರ್ಹ ಸದಸ್ಯರುಗಳಿಗೆ ಸಾಮಾನ್ಯಸಭೆಯ ಆಹ್ವಾನ ಪತ್ರಿಕೆಯನ್ನು ಅಂಚೆ ಮೂಲಕ ಕಳುಹಿಸಲಾಗಿದೆ. ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಸಭೆಗೆ ಆಗಮಿಸಿ, ಈ ಆಹ್ವಾನ ಪತ್ರಿಕೆ ಮೂಲಕ ಅರ್ಹ ಸದಸ್ಯರು ವಾರ್ಷಿಕ ಸಾಮಾನ್ಯಸಭೆಗೆ ಹಾಜರಾಗಬೇಕೆಂದು ಆಡಳಿತ ಮಂಡಳಿಯ ಪರವಾಗಿ ವಿನಂತಿಸಲಾಗಿದೆ.



ಶ್ರೀ ಟಿ.ಎಂ. ಪಾಲಾಕ್ಷ
ಅಧ್ಯಕ್ಷರು

ನಿರ್ದೇಶಕ ಮಂಡಳಿ



ಶ್ರೀ ವಿ.ಹೆಚ್. ಕುಮಾರ್
ಉಪಾಧ್ಯಕ್ಷರು



ಶ್ರೀ ವೀರೇಶ್ ಸಿ.ಜಿ., ನಿರ್ದೇಶಕರು
ಶ್ರೀ ಎನ್.ಹೆಚ್. ಪ್ರಕಾಶಚಾರಿ, ನಿರ್ದೇಶಕರು
ಶ್ರೀ ನ್ಯಾಮತಿ ವಾಮದೇವ್, ನಿರ್ದೇಶಕರು
ಶ್ರೀ ಇಮ್ರಾನ್ ಖಾನ್ ಆರ್., ನಿರ್ದೇಶಕರು
ಶ್ರೀ ರುದ್ರೇಶ್ ಡಿ., ನಿರ್ದೇಶಕರು
ಶ್ರೀ ಪ್ರಸಾದ್ ವಿ. ರಾಯ್ಕರ್, ನಿರ್ದೇಶಕರು



ಶ್ರೀ ನರಸಿಂಹಮೂರ್ತಿ ಸಿ., ನಿರ್ದೇಶಕರು
ಶ್ರೀಮತಿ ಸ್ಮಿತ ಡಿ.ಆರ್., ನಿರ್ದೇಶಕರು
ಶ್ರೀಮತಿ ಲತಾ ಕೆ., ನಿರ್ದೇಶಕರು
ಶ್ರೀಮತಿ ರಾಜೇಶ್ವರಿ ಮುರುಗೇಶ್, ನಿರ್ದೇಶಕರು
ಶ್ರೀ ಮಹಮ್ಮದ್ ಉಬೇದುಲ್ಲಾ, ಮುಖ್ಯ ಕಾರ್ಯನಿರ್ವಹಣಾಧಿಕಾರಿ

| ವಿವರ | 2019-2020 | 2020-2021 | 2021-2022 | 2022-2023 | 2023-24 |
|---|---|---|---|---|---|
| ಸದಸ್ಯರ ಸಂಖ್ಯೆ | 821 | 861 | 926 | 996 | 1070 |
| ಷೇರು ಬಂಡವಾಳ | 20,83,800-00 | 21,94,300.00 | 23,33,800.00 | 24,47,300.00 | 25,35,600-00 |
| ನಿಧಿಗಳು | 5,98,615-00 | 11,04,195.00 | 17,58,811.00 | 24,58,770.00 | 28,45,402-00 |
| ಠೇವಣಿಗಳು | 2,18,39,977-70 | 2,46,47,843.70 | 3,00,62,179.55 | 3,41,63,406.56 | 3,31,30,733-56 |
| ಸಾಲ ಮತ್ತು ಮುಂಗಡಗಳು | 1,93,44,351-00 | 2,14,30,790.00 | 2,56,21,214.00 | 3,03,49,575.00 | 3,24,21,418-00 |
| ದುಡಿಯುವ ಬಂಡವಾಳ | 2,52,54,656-70 | 2,90,02,512.70 | 3,54,46,003.55 | 4,08,32,478.56 | 4,07,90,526-56 |
| ನಿವ್ವಳ ಲಾಭ | 6,16,637-00 | 7,72,251.00 | 8,73,875.00 | 6,00,224.00 | 8,77,292-00 |
| ಲಾಭಾಂಶ ನೀಡಿಕೆ | 0 | 5% | 6% | 6% | 8% |
| ಲೆಕ್ಕ ಪರಿಶೋಧಕ ವರ್ಗ | 'ಎ' | 'ಎ' | 'ಎ' | 'ಎ' | 'ಎ' |

ಸದಸ್ಯರಿಗೆ ವಿಶೇಷ ಸೂಚನೆ : ಸಂಘದ ಸದಸ್ಯರು ತಮ್ಮ ಖಾತೆಗಳಿಗೆ ಕೆವೈಸಿ (Update) ಮಾಡಿಸುವುದು ಖಡ್ಡಾಯ. ಇತ್ತೀಚಿನ ಸೌಹಾರ್ದ ಸಹಕಾರಿ ತಿದ್ದುಪಡಿ ಪ್ರಕಾರ : - ಹಿಂದಿನ ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ ಕನಿಷ್ಟ ಎರಡು ವಾರ್ಷಿಕ ಸಾಮಾನ್ಯ ಸಭೆಗಳಿಗೆ ಹಾಜರಿಗಿಲ್ಲದಿದ್ದರೆ ಅಥವಾ ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಗಳಿಗಾಗಿ ಉಪವಿಧಿ ನಿರ್ಧಿಷ್ಟಪಡಿಸಿರುವ ಕನಿಷ್ಟ ಮಟ್ಟದ ಸಹಕಾರಿಯ ಸೇವೆಯನ್ನು ಬಳಸಿಕೊಂಡಿಲ್ಲದಿದ್ದರೆ ಅಂತಹ ಸದಸ್ಯರು ಸಭೆ, ಚುನಾವಣೆಗಳಲ್ಲಿ ಪಾಲ್ಗೊಳ್ಳಲು ಮತ್ತು ಮತ ಚಲಾಯಿಸಲು ಮತ್ತು ಕಾಯ್ದೆಯ ಪ್ರಕರಣ 20ರನ್ವಯ ಮುಂದಿನ ಒಂದು ವರ್ಷದವರೆಗೆ ಮತದಾನ ಮಾಡಲು ಹಾಗೂ ಚುನಾವಣೆಯಲ್ಲಿ ಭಾಗವಹಿಸಲು ಅನರ್ಹರಾಗುತ್ತಾರೆ.

ದಿನಾಂಕ : 14.09.2024
ದಾವಣಗೆರೆ.

ಕಾರ್ಯಕಾರಿ ಮಂಡಳಿ ಅಪ್ಪಣೆ ಮೇರೆಗೆ
ಸಹಿ/- (ಮಹಮ್ಮದ್ ಉಬೇದುಲ್ಲಾ) ಮುಖ್ಯ ಕಾರ್ಯನಿರ್ವಹಣಾಧಿಕಾರಿ

# ಕೆಚ್ಚೆದೆಯ ಸಾಧಕಿ, ಮೃದು ಹೃದಯಿ ಮೇಡಂ ನಿರ್ಮಲಾ ಕೇಸರಿ

ರಾಜ್ಯದ ಆರೋಗ್ಯ ಕ್ಷೇತ್ರದಲ್ಲಿ ಹಲವಾರು ವೈದ್ಯರು, ಸಹಾಯಕ ಸಿಬ್ಬಂದಿ ಸಮಾಜಕ್ಕೆ ಅವಿಸ್ಮರಣೀಯ ಸೇವೆಯನ್ನು ಸಲ್ಲಿಸಿದ್ದಾರೆ. ಅವರಲ್ಲಿ ಅಪರೂಪದ ವ್ಯಕ್ತಿತ್ವದ ಪರಿಪೂರ್ಣ ಮಹಿಳೆ ದಾವಣಗೆರೆಯ ಸುತ್ತಲಿನ ಜಿಲ್ಲೆಗಳ ಜನಮಾನಸದಲ್ಲಿ ಗತಿಸಿದ ನಂತರವೂ ಅಮರರಾಗಿದ್ದಾರೆ ಡಾ. ನಿರ್ಮಲ ಕೇಸರಿ.

ಈಗಿನ ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಸೋಮನಹಳ್ಳಿ ಇವರ ಊರಿನ ಸ್ಥಾನ. ಅವರ ಪಾಟೀಲ ಮನೆತನ ನಂತರ ಕೇಸರಿಯಾಗಿ ಬದಲಾದದ್ದು ಈಗ ಇತಿಹಾಸ. ಅಸಂಖ್ಯಾತ ವೈದ್ಯರು/ ವೈದ್ಯೇತರ ವಿದ್ಯಾರ್ಥಿಗಳಿಗೆ ಮಾದರಿಯಾಗಿರುವ ನಿರ್ಮಲ ಕೇಸರಿಯವರಿಗೆ ಅವರ ತಂದೆ ವಕೀಲ ಮಹಾದೇವ ಕೇಸರಿಯವರೇ ಮೊದಲ ಆದರ್ಶ ವ್ಯಕ್ತಿ. ಅವರ ಮೇಲೆ ಅಪಾರವಾದ ಗೌರವ, ಪ್ರೀತಿಯನ್ನು ಹೊಂದಿದ್ದ ನಿರ್ಮಲ ಕೇಸರಿ ತಮ್ಮ ಜೀವನದುದ್ದಕ್ಕೂ ಅವರ ನೀತಿಯನ್ನು ಪಾಲಿಸುತ್ತಿದ್ದರು. ವಿದ್ಯಾರ್ಥಿ ಜೀವನವನ್ನು ಧಾರವಾಡದಲ್ಲಿ ಕಳೆದಿದ್ದ ನಿರ್ಮಲ ಕೇಸರಿಯವರದು ತುಂಬು ಕುಟುಂಬ. ಸೀಮಿತ ಆದಾಯದಲ್ಲಿ ಕುಟುಂಬ ನಿರ್ವಹಣೆಯ ಜೊತೆಗೆ ಸಮಾಜಸೇವೆಗೂ ಹಣ ವ್ಯಯಿಸುತ್ತಿದ್ದ ತಂದೆಯ ವಿಶಾಲ ಮನೋಭಾವ ಮೇಡಂ ಅವರ ಮೇಲೆ ಆಳವಾದ ಪ್ರಭಾವವನ್ನು ಬೀರಿತು. ಪ್ರತಿ ಭಾನುವಾರ ಅವರ ಮನೆಯಲ್ಲಿ ಬಡ, ಅಸಹಾಯಕ ಜನರಿಗೆ ಕಲ್ಯಾಣ ಕಾರ್ಯಗಳನ್ನು ಏರ್ಪಡಿಸಿ ಪಾಯಸವನ್ನು ಉಣಬಡಿಸಿ ಹಬ್ಬದಂತೆ ಆಚರಿಸುತ್ತಿದ್ದರು. ಅಸಹಾಯಕರಿಗೆ ಕಾನೂನಿನ ಸಹಾಯ, ವಿಧವಾ ವಿವಾಹದಂತ ಕ್ರಾಂತಿಕಾರಿ ಕಾರ್ಯಕ್ರಮ ಗಳನ್ನು ಅಂದಿನ ದಿನಗಳಲ್ಲೇ ತಮ್ಮ ಮನೆಯಲ್ಲಿ ನಡೆಸಿಕೊಡುತ್ತಿದ್ದರು ಮಹಾದೇವ ಕೇಸರಿ. ಸೇವೆಗೆ ಮನಸ್ಸು ಮಾಡಿದರೆ ಕೌಟುಂಬಿಕ ವ್ಯವಸ್ಥೆ, ವೈಯಕ್ತಿಕ ಸ್ಥಿತಿಗಳು ಎಂದಿಗೂ ನಮ್ಮ ಮಾರ್ಗಕ್ಕೆ ಅಡ್ಡಬರಲಾರವು ಎಂಬುದು ಮೇಡಂ ಅವರ ಅಚಲವಾದ ನಿಲುವು. ಅದಕ್ಕೆ ತಮ್ಮ ತಂದೆಯವರೇ ಸಾಕ್ಷಿ ಎಂದು ಆಗಾಗ ಹೇಳುತ್ತಿದ್ದರು. ತುಂಬು ಕುಟುಂಬದ ಯಜಮಾನರಾಗಿಯೂ ಕಷ್ಟದ ಆರ್ಥಿಕ ಪರಿಸ್ಥಿತಿಯಲ್ಲಿಯೂ ಅವರು ಸಮಾಜದ ನಿರ್ಗತಿಕರ ಸೇವೆಗೆ ಹಿಂಜರಿಯಲಿಲ್ಲ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು.

ಹಣದ ಮುಗ್ಗಟ್ಟಿನಲ್ಲೇ ಮುಂಬೈನ ಗ್ರಾಂಟ್ ಮೆಡಿಕಲ್ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್ ವಿದ್ಯಾಭ್ಯಾಸವನ್ನು ಮುಗಿಸಿದರು. ಆ ದಿನಗಳಲ್ಲಿ ವಿದ್ಯಾಭ್ಯಾಸದ ನಿರ್ವಹಣೆಗೆ ಆಕಾಶವಾಣಿಯಲ್ಲಿ ನಿರೂಪಕಿಯಾಗಿ ಕೆಲಸ ಮಾಡಿದ್ದನ್ನು ಅವರು ಹಲವು ಬಾರಿ ನೆನಪಿಸಿಕೊಳ್ಳುತ್ತಿದ್ದರು.



ನಂತರದ ದಿನಗಳಲ್ಲಿ ಹೆಚ್ಚಿನ ವೈದ್ಯಕೀಯ ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡ್ ಮತ್ತು ಅಮೇರಿಕಾ ದೇಶಗಳಿಗೂ ತೆರಳಿದರು. ಹತ್ತಾರು ವರ್ಷಗಳು ಪಾಶ್ಚಿಮಾತ್ಯ ಸಂಸ್ಕೃತಿಯ ಆರ್ಭಟದ ಮಧ್ಯೆಯೂ ಭಾರತೀಯ ನಡವಳಿಕೆಯನ್ನು ಪಾಲಿಸಿ ಕೊಂಡು ತಾಯ್ನಾಡಿನ ಸಂಸ್ಕೃತಿ ಕರೆಗೆ ಓಗೊಟ್ಟು ಅನೇಕ ವಿದೇಶಿ ವೈದ್ಯಕೀಯ ಪದವಿಗಳೊಂದಿಗೆ ಮತ್ತೆ ಭಾರತಕ್ಕೆ ಹಿಂದಿರುಗಿ, ಜೆ.ಜೆ.ಎಂ. ವೈದ್ಯಕೀಯ ಕಾಲೇಜಿನಲ್ಲಿ ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದರು. ವ್ಯಕ್ತಿಗಳ ಕಾರ್ಯಕ್ಷಮತೆ, ಬುದ್ಧಿಮತ್ತೆ, ಸೇವಾವೈಖರಿ, ಪ್ರಾಮಾಣಿಕತೆ ಗುರುತಿಸಿ, ಆದರಿಸಿ ಪ್ರೋತ್ಸಾಹಿಸುವ ಪರಿಪಾಠವನ್ನಿಟ್ಟುಕೊಂಡಿರುವ ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಶಾಮನೂರು ಶಿವಶಂಕರಪ್ಪನವರು ನಿರ್ಮಲ ಕೇಸರಿಯವರಲ್ಲಿರುವ ಪ್ರತಿಭೆ, ಇಚ್ಛಾಶಕ್ತಿಯನ್ನು ಗಮನಿಸಿ ಅವರಿಗೆ ಹೆಚ್ಚಿನ ಜವಾಬ್ದಾರಿಯನ್ನು ವಹಿಸುತ್ತಲೇ ಬಂದರು.

ಮುಂದುವರೆದ ದೇಶಗಳಲ್ಲಿನ ಮತ್ತು ಭಾರತದಲ್ಲಿಯ ಆರೋಗ್ಯ ಸ್ಥಿತಿಗತಿಗಳಲ್ಲಿ ಅಜಗಜಾಂತರ ವ್ಯತ್ಯಾಸವಿರುವುದನ್ನು ಮನಗಂಡು ದಂಗಾದರು. ಇಂಥಾ ಸ್ಥಿತಿಯಲ್ಲಿ ತಾವು ದೇಶಕ್ಕೆ ಮರಳಿ ಬಂದದ್ದು ಸಾರ್ಥಕವಾಯಿತೆಂದುಕೊಂಡು ಜನಸೇವೆಗೆ ನಿಂತರು. ಸಮುದಾಯದಲ್ಲಿ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುವುದರೊಂದಿಗೆ ತಮ್ಮ ಸೇವೆಯನ್ನು ಪ್ರಾರಂಭಿಸಿದರು. ಸ್ವಚ್ಛತೆಯ ಮೂಲಕ ಕಾಯಿಲೆಗಳನ್ನು ದೂರವಿಡುವ ಬಗ್ಗೆ ಜನರಿಗೆ ಅಂದಿನ ದಿನಗಳಲ್ಲೇ (ಸುಮಾರು 50 ವರ್ಷಗಳ ಹಿಂದೆ) ಮನದಟ್ಟು ಮಾಡಲು ಪ್ರಯತ್ನಿಸಿದರು.

ಅವರ ವೈದ್ಯಕೀಯ/ ವೈದ್ಯಕೇತರ ಕ್ಷೇತ್ರದಲ್ಲಿನ ಸಾಧನೆ, ಸೇವೆಗಳ ಪಟ್ಟಿ ಮಾಡುತ್ತಾ ಹೋದರೆ ಅದು ದಾವಣಗೆರೆಯಿಂದ ಬೆಂಗಳೂರಿನಷ್ಟು ಉದ್ದವಾಗಬಹುದೆಂದರೂ ಉತ್ಪ್ರೇಕ್ಷೆಯಾಗಲಾರದು. ಮಕ್ಕಳ ಆರೋಗ್ಯದ ಬಗ್ಗೆ ಮುಖ್ಯವಾಗಿ ಆಹಾರ ಪೋಷಣೆ, ಸ್ತನ್ಯಪಾನದ ಬಗ್ಗೆ ಅವರ ಕಾಳಜಿ, ಸಂಶೋಧನೆ ಕೊಡುಗೆಗಳು ಇಡೀ ದೇಶದ ಗಮನವನ್ನು ಸೆಳೆದವು.


ಅಂದಿನ ದಿನಗಳಲ್ಲಿ ಅಪೌಷ್ಟಕತೆ ನಮ್ಮ ದೇಶದಲ್ಲಿ ಮನೆ ಮಾಡಿ, ದೇಶದ ಪ್ರಗತಿಗೂ ಮಾರಕವಾಗಿತ್ತು. ಸಾಂಕ್ರಾಮಿಕ ರೋಗಗಳಿಂದ ಮಕ್ಕಳ ಸಾವು ಏರುಗತಿಯಲ್ಲಿ ನಡೆದಿದ್ದ ಆ ಸಂದರ್ಭದಲ್ಲಿ ಮಧ್ಯ ಕರ್ನಾಟಕಕ್ಕೆ ಮಕ್ಕಳ ಪಾಲಿಗೆ ಸಂಜೀವಿನಿಯಾಗಿದ್ದರು ಡಾ. ನಿರ್ಮಲ ಕೇಸರಿ.

ಆಡಳಿತ ವರ್ಗ/ ಸರ್ಕಾರದ ಸಂಯೋಗದೊಂದಿಗೆ ಮಕ್ಕಳಿಗೆ ಪೌಷ್ಟಿಕ ಆಹಾರ ಔಷಧಿಗಳ ವ್ಯವಸ್ಥೆ ಮಾಡುವುದರ ಜೊತೆಗೆ ಬಾಟಲಿಯಲ್ಲಿ ಹಾಲುಣಿಸುವ ಮಾರಕ ವಿಧಾನಗಳ ಬಗ್ಗೆ ವೈದ್ಯರಲ್ಲಿ, ಸಮಾಜದಲ್ಲಿ, ಆರೋಗ್ಯ ಮತ್ತು ಸಾಮಾಜಿಕ ಕಾರ್ಯಕರ್ತರಲ್ಲಿ, ವಿದ್ಯಾರ್ಥಿಗಳಲ್ಲಿ ಅರಿವನ್ನು ಮೂಡಿಸುವಲ್ಲಿ ಯಶಸ್ವಿಯಾದರು. ಸ್ತನ್ಯಪಾನ ಕ್ಷೇತ್ರದಲ್ಲಿ ಅನೇಕ ಸ್ಥಳೀಯ, ಸರಳ ಮತ್ತು ಜನಸ್ನೇಹಿ ಆವಿಷ್ಕಾರಗಳನ್ನು ಪ್ರಚಾರಗೊಳಿಸಿದರು. ಅವುಗಳಲ್ಲಿ ಒಂದಾದ ತಾಯಂದಿರ ಸ್ತನದ ಹುದುಗಿರುವ ತೊಟ್ಟನ್ನು ಸುಲಭವಾಗಿ ಸರಿಪಡಿಸಬಹುದಾದ ಸಿರಿಂಜ್ ವಿಧಾನವು ಅಂತರಾಷ್ಟ್ರೀಯ ಮಟ್ಟದಲ್ಲಿ ಸದ್ದುಮಾಡಿ ಅನೇಕ ತಾಯಿ-ಮಕ್ಕಳ ಪಾಲಿಗೆ ವರವಾಗಿ ಪರಿಣಮಿಸಿತು. ಇವರು ಪರಿಚಯಿಸಿದ ದಾವಣಗೆರೆ ಮಿಕ್ಸ್ ಎಂಬ ಪೌಷ್ಠಿಕ ಆಹಾರ ಪ್ರಾಣಾಪಾಯದ ಅಂಚಿನಲ್ಲಿದ್ದ ಅನೇಕ ಅಪೌಷ್ಠಿಕ ಮಕ್ಕಳ ಜೀವನವನ್ನು ಉಳಿಸಿದ್ದು ಈಗ ಇತಿಹಾಸ.

**ಗುರುವಾಗಿ ಡಾ. ನಿರ್ಮಲ ಕೇಸರಿ :** ಮಕ್ಕಳ ಆರೋಗ್ಯ ಮತ್ತು ಕ್ಷೇಮದ ಬಗ್ಗೆ ದೂರದೃಷ್ಟಿಯನ್ನಿಟ್ಟುಕೊಂಡಿದ್ದ ಮೇಡಂ ಅದನ್ನು ಕಾರ್ಯರೂಪಕ್ಕೆ ತರಲು ಅನುವಾಗುವಂತೆಯೇ ತಮ್ಮ ವಿದ್ಯಾರ್ಥಿಗಳನ್ನು ಹುರಿದುಂಬಿಸಿ ಸಿದ್ಧಗೊಳಿಸಿದರು. ಅವರ ಮಾರ್ಗದರ್ಶನದಲ್ಲಿ ನೂರಾರು ವೈದ್ಯರು ಮತ್ತು ಮಕ್ಕಳ ವೈದ್ಯರು ದೇಶಾದ್ಯಂತ ಕಾರ್ಯಪ್ರವೃತ್ತರಾಗಿ ಮೇಡಂ ಕನಸನ್ನು ನನಸಾಗಿಸಲು ಪಣ ತೊಟ್ಟು ಅದರಲ್ಲಿ ಯಶಸ್ವಿಯೂ ಆದರು. ತಮ್ಮ ವಿಶಾಲ ಮನೋಭಾವ, ಕಾರ್ಯಕ್ಷಮತೆ, ಎಲ್ಲರನ್ನು ಪ್ರೀತಿಸುವ ಸ್ವಭಾವದ ಮೂಲಕ ತಮ್ಮ ಎಲ್ಲಾ ವಿದ್ಯಾರ್ಥಿಗಳ ಪಾಲಿಗೆ ಆದರ್ಶಪ್ರಾಯ ಗುರುವಾದರು. ಅದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ಮಾತೃ ಸ್ವರೂಪಿಯಾದರು.

ತಮ್ಮ ಜೀವನದಲ್ಲಿ ಆರೋಗ್ಯವಾಗಿರುವವರೆಗೂ ಬಾಪೂಜಿ ಮಕ್ಕಳ ಆಸ್ಪತ್ರೆಯ ನಿರ್ದೇಶಕರಾಗಿ ಮಕ್ಕಳ ಸೇವೆಯನ್ನು ಮುಂದುವರೆಸಿದರು. ಅಲಂಕಾರ, ಆಡಂಬರ, ದೊಡ್ಡಸ್ತಿಕೆ, ದರ್ಪ ಅವರಲ್ಲಿ ಎಂದೂ ಕಂಡುಬರಲಿಲ್ಲ. ಬದಲಾಗಿ ಪ್ರೀತಿ, ಆತ್ಮವಿಶ್ವಾಸ, ಪ್ರಾಮಾಣಿಕತೆಗಳನ್ನೇ ಆಭರಣವಾಗಿ ಧರಿಸಿದ್ದರು. ಬಹುತೇಕ ಸ್ತ್ರೀವಾದಿಯಾಗಿದ್ದ ಅವರು ಎಂದಿಗೂ ಹೆಣ್ಣುಮಕ್ಕಳನ್ನು ಬಿಟ್ಟುಕೊಡುದೇ ಪ್ರತಿ ಹೆಣ್ಣು ಮಗುವನ್ನು ಭಾರತೀಯ ಸಂಸ್ಕೃತಿಯ ಪ್ರತೀಕ ಎನ್ನುವಂತೆ ಕಾಣುತ್ತಿದ್ದರು. ಆದರೆ ಇತ್ತೀಚಿನ ವಿದ್ಯಾಮಾನಗಳಲ್ಲಿ ಯುವ ಜನತೆ ನಡೆಯುತ್ತಿರುವ ದಿಕ್ಕನ್ನು ಕಂಡು ಮರುಗಿದ್ದೂ ಉಂಟು.

ನಾಡಿನ ಮಕ್ಕಳ, ಮಹಿಳೆಯರ, ವೈದ್ಯರ, ವಿದ್ಯಾರ್ಥಿಗಳ ಹೃದಯದಲ್ಲಿ ಉನ್ನತ ಸ್ಥಾನವನ್ನು ಅಲಂಕರಿಸಿ ಅವರೆಲ್ಲರ ಪಾಲಿಗೆ ಅಜರಾಮರವಾದರು. ಮಕ್ಕಳ ಉನ್ನತ ಚಿಕಿತ್ಸೆ ಅಭ್ಯುದಯದ ಕಾಯಕದಲ್ಲಿ ಮುಳುಗಿದ್ದವರಿಗೆ ಕೊನೆಗೆ ಕಾಲ ಸ್ವಲ್ಪ ವಿರ್ದಯಿಯಾಗಿದ್ದು ಕಾಕತಾಳೀಯ. ಮೆದುಳಿನ ಸವೆತದ ಖಾಯಿಲೆಗೆ ಒಳಗಾಗಿ ತೀವ್ರತರವಾದ ಮರೆವು ಅವರನ್ನು ಕಾಡತೊಡಗಿತು. ಮಕ್ಕಳ ತಜ್ಞೆ ನಿರ್ಮಲ ಕೇಸರಿ ಕೊನೆಯ ದಿನಗಳಲ್ಲಿ ಮಗುವಿನಂತಾದರು. ಶರಣರ ಮಹಿಮೆ ಮರಣದಲ್ಲಿ ನೋಡು ಎಂಬ ನುಡಿಯಂತೆ ಮೇಡಂರವರ ಕೊನೆಯ ದಿನಗಳಲ್ಲಿ ಅವರ ಸೇವೆಯನ್ನು ಅವರ ವಿದ್ಯಾರ್ಥಿಗಳು ಸಹೋದ್ಯೋಗಿ ವೈದ್ಯರು, ಬಾಪೂಜಿ ಮಕ್ಕಳ ಆಸ್ಪತ್ರೆಯ ಎಲ್ಲಾ ಶುಶ್ರೂಕಿಯರು ತಮಗೆ ಸಿಕ್ಕ ಸದಾವಕಾಶ ಎಂಬಂತೆ ಡಾ. ಬಾಣಾಪೂರಮಠ್ ರವರ ನೇತೃತ್ವದಲ್ಲಿ ಡಾ. ಎಲಿಯವರ ಸಹಾಯದೊಂದಿಗೆ, ಟೊಂಕಕಟ್ಟಿ ನಿಂತರು. ಅವರು ಜನರಿಗೆ ನೀಡಿದ ಪ್ರೀತಿ, ಆದರಗಳು ವ್ಯರ್ಥವಾಗದೇ. ಅವರ ಅನುಯಾಯಿಗಳು, ವಿದ್ಯಾರ್ಥಿಗಳು ತೋರಿದ ಪ್ರೀತಿ, ಮಮತೆ, ಗೌರವ ಅಪಾರ. 08.01.2016 ರಂದು ಅವರು ಈ ಲೋಕದಿಂದ ಭೌತಿಕವಾಗಿ ಮರೆಯಾದರು. ಅವರ ಜೀವನ, ಕಾಯಕ ನಿಷ್ಠೆ. ಮಾನವ ಪ್ರೇಮ, ಪ್ರಾಮಾಣಿಕತೆ, ಸಮುದಾಯದ ಕಾಳಜಿ ನಮಗೆ ಎಂದೆಂದಿಗೂ ಮಾದರಿ ಎಂಬುದು ಸೂರ್ಯಚಂದ್ರರಷ್ಟೇ ಸತ್ಯ.



**- ಡಾ. ಎಸ್. ಮೃತ್ಯುಂಜಯ,**
ಪ್ರಾಧ್ಯಾಪಕರು,
ಮಕ್ಕಳ ವಿಭಾಗ,
ಜೆ.ಜೆ.ಎಂ. ವೈದ್ಯಕೀಯ
ಮಹಾವಿದ್ಯಾಲಯ, ದಾವಣಗೆರೆ.

## ಇನ್‌ಸೈಟ್ಸ್ ಸಂಸ್ಥೆಯಿಂದ ಸ್ಪರ್ಧಾತ್ಮಕ ತರಬೇತಿ ಕೇಂದ್ರ ಆರಂಭ : ವಿನಯ್

ದಾವಣಗೆರೆ, ಸೆ.13- ಇದೇ ಪ್ರಥಮ ಬಾರಿಗೆ ದಾವಣಗೆರೆಯಲ್ಲಿ ಇನ್‌ಸೈಟ್ಸ್ ಸಂಸ್ಥೆಯಿಂದ ಐಎಎಸ್, ಕೆಎಎಸ್ ತರಬೇತಿ ಕೇಂದ್ರ ಸ್ಥಾಪಿಸಲಾಗಿದೆ ಎಂದು ಸಂಸ್ಥೆಯ ಸ್ಥಾಪಕರೂ, ನಿರ್ದೇಶಕರೂ ಆದ ಜಿ.ಬಿ. ವಿನಯ್ ಕುಮಾರ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ನಾಡಿದ್ದು ದಿನಾಂಕ 15ರ ಭಾನುವಾರ ತರಬೇತಿ ಕೇಂದ್ರವನ್ನು ಸರಳವಾಗಿ ಉದ್ಘಾಟಿಸಲಾಗುವುದು. 16ರಿಂದ ತರಗತಿಗಳು ಆರಂಭವಾಗಲಿವೆ ಎಂದರು. ದಿನಾಂಕ 30ರಿಂದ ಐಎಎಸ್ ತರಬೇತಿ ಆರಂಭವಾಗಲಿದೆ ಎಂದರು.

ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಪ್ರತಿ ಕ್ಷೇತ್ರದ 10 ಬಡ ಮಕ್ಕಳಂತೆ ಒಟ್ಟು 80 ಮಕ್ಕಳಿಗೆ ಪ್ರತಿ ವರ್ಷ ಉಚಿತವಾಗಿ ಐಎಎಸ್ ತರಬೇತಿ ನೀಡಲಾಗುವುದು. ಕೆಎಎಸ್ ತರಬೇತಿಯನ್ನೂ ಬಡ ಹಾಗೂ ನಿರ್ಗತಿಕ ಮಕ್ಕಳಿಗೆ ರಿಯಾಯಿತಿಯಲ್ಲಿ ನೀಡಲಾಗುವುದು ಎಂದು ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಎಸ್. ಶರತ್‌ಕುಮಾರ್ ಉಪಸ್ಥಿತರಿದ್ದರು.

## ವಿದ್ಯಾನಗರದಲ್ಲಿ ಇಂದು ಮಟ್ಟಿ ಆಂಜನೇಯ ಸ್ವಾಮಿ ಪರವು



ವಿದ್ಯಾನಗರದ ಶ್ರೀ ಮಟ್ಟಿ ಆಂಜನೇಯ ಸ್ವಾಮಿಗೆ ಭಾದ್ರಪದ ಮಾಸದಲ್ಲಿ ಎಡೆ ಪರವು ಕಾರ್ಯಕ್ರಮವು ಇಂದು ಬೆಳಿಗ್ಗೆ 8.30 ರಿಂದ 12.30ರವರೆಗೆ ಪೂಜಾ ಕಾರ್ಯಕ್ರಮ ಹಾಗೂ ಮಧ್ಯಾಹ್ನ 12.30ರಿಂದ ಸ್ವಾಮಿ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ.

## ನಗರದಲ್ಲಿ ಇಂದು 'ಮಸೀದಿ ದರ್ಶನ' ಕಾರ್ಯಕ್ರಮ

ದಾವಣಗೆರೆ, ಸೆ. 13- ನಗರದ ಬಾರ್ ಲೈನ್ ರಸ್ತೆಯಲ್ಲಿರುವ ಮರ್ಕಜಿ ಮಸ್ಜಿದ್ ಎ ಮಹಮ್ಮದೀಯ ಮಸೀದಿಯಲ್ಲಿ ನಾಳೆ ದಿನಾಂಕ 14 ರ ಶನಿವಾರ ಬೆಳಿಗ್ಗೆ 10 ರಿಂದ ಸಂಜೆ 7ರವರೆಗೆ 'ನಮ್ಮೂರ ಮಸೀದಿ ನೋಡ ಬನ್ನಿ' ಮಸೀದಿ ದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಮಸೀದಿ ಸದಸ್ಯರೂ, ಕನ್ನಡ ಶಿಕ್ಷಕರಾದ ಮಹಮ್ಮದ್ ಉಮರ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಮಸೀದಿಯಲ್ಲಿ ನಡೆಯುವ ಪ್ರಾರ್ಥನೆಗಳು, ಸಭಾ ವಿಧಾನ, ನಮಾಜ್ ಮಾಡುವ ವಿಧಿವಿಧಾನಗಳನ್ನು ಜನರಿಗೆ ಪರಿಚಯಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ಆಯೋಜನೆಗೊಂಡಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮಸೀದಿ ಅಧ್ಯಕ್ಷ ಸೈಯದ್ ಅಹಮದ್, ಮೌಲ್ವಿ ಉಮರ್ ಫಾರೂಖ್ ಮೊಹಮ್ಮದಿ, ಶೇಖ್ ನೂರುಲ್ಲಾ, ಎಂ.ಎ. ಅತಾವುಲ್ಲಾ ಮತ್ತಿತರರು ಉಪಸ್ಥಿತರಿದ್ದರು.

## ಹರಿಹರ ಗಡಿಭಾಗದಲ್ಲಿ ನಾಳೆ 'ಮಾನವ ಸರಪಳಿ' ಕಾರ್ಯಕ್ರಮ

ಹರಿಹರ, ಸೆ,13- ಇದೇ 15ರಂದು ನಡೆಯಲಿರುವ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯು ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಸಂವಿಧಾನದ ಆಶಯಗಳನ್ನು ಮನವರಿಕೆ ಮಾಡಿಕೊಡುವಂತಹ ಕಾರ್ಯಕ್ರಮವಾಗಿದೆ ಎಂದು ಹಾವೇರಿ ಜಿಲ್ಲಾ ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ ಹೇಳಿದರು.



**ಸ್ಥಳ ಪರಿಶೀಲಿಸಿದ ಹಾವೇರಿ ಎಡಿಸಿ ಪೂಜಾರ್ ವೀರಮಲ್ಲಪ್ಪ**

ದಿನಾಚರಣೆ ಅಂಗವಾಗಿ ಮಾನವ ಸರಪಳಿ ಕಾರ್ಯಕ್ರಮದ ಸಿದ್ಧತೆ ಕುರಿತಂತೆ ನಗರದ ತುಂಗಭದ್ರಾ ನದಿಯ ಸೇತುವೆ ಹತ್ತಿರ ಗಡಿ ಭಾಗದ ಸ್ಥಳಕ್ಕೆ ಭೇಟಿಕೊಟ್ಟು ಸ್ಥಳ ಪರಿಶೀಲನೆ ನಡೆಸಿ ಅವರು ಮಾತನಾಡಿದರು.

ಜಿಲ್ಲೆಯ ನ್ಯಾಮತಿ ಮತ್ತು ಹರಿಹರ ತಾಲ್ಲೂಕಿನ ಮೂಲಕ ಹಾವೇರಿ ಜಿಲ್ಲೆಯಲ್ಲಿ ಮಾನವನ ಸರಪಳಿಯ ಕಾರ್ಯಕ್ರಮ ಆಯೋಜಿಸಲಾಗಿದೆ. ಇದರಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಭಾಗವಹಿಸುತ್ತಿದ್ದು, ಹರಿಹರದಿಂದ ಹಾದು ಹಾವೇರಿ ಜಿಲ್ಲೆಯಲ್ಲಿ ಕೂಡಿಸುವ ನಿಟ್ಟಿನಲ್ಲಿ ರಾಣೆಬೆನ್ನೂರು ತಾಲ್ಲೂಕಿನ ಗಡಿ ಭಾಗವಾದ ಕೊಡಿಯಾಲ, ಹೊಸಪೇಟೆ ಹಾವೇರಿ ಜಿಲ್ಲಾ ಕೇಂದ್ರದವರೆಗೂ ಮಾನವ ಸರಪಳಿ ಪ್ರಕ್ರಿಯೆಗಳು ನಡೆಯುತ್ತದೆ. ಹಾಗಾಗಿ ಈ ಕಾರ್ಯಕ್ರಮ ಯಶಸ್ವಿಯಾಗಿಸಲು ಸಾರ್ವಜನಿಕರು, ವಿದ್ಯಾರ್ಥಿಗಳು ಮತ್ತು ಎಲ್ಲಾ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಭಾಗವಹಿಸುವ ಮೂಲಕ ಯಶಸ್ವಿಗೊಳಿಸುವಂತೆ ಕೋರಿದರು.

ಈ ಸಂದರ್ಭದಲ್ಲಿ ಹರಿಹರ ತಹಶೀಲ್ದಾರ್ ಗುರುಬಸವರಾಜ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರಾಮಕೃಷ್ಣಪ್ಪ, ಬಿಇಓ ಡಿ. ದುರುಗಪ್ಪ, ರಾಣೆಬೆನ್ನೂರು ತಹಶೀಲ್ದಾರ್ ಆರ್. ಹೆಚ್. ಭಗವಾನ್, ಪಿಎಸ್‌ಐಗಳಾದ ಸಿದ್ದೇಶ್, ಪ್ರಸನ್ನಕುಮಾರ್, ಕೊಡಿಯಾಲ ಹೊಸಪೇಟೆ ಗ್ರಾಪಂ ಸದಸ್ಯರಾದ ಬಸಣ್ಣೆಪ್ಪ, ದಿನೇಶ್ ನಲವಾಗಲು, ವಿ. ಎ. ಹೇಮಂತ್ ಕುಮಾರ್, ಅಂಗನವಾಡಿ ಶಿಕ್ಷಕಿ ಚಂದ್ರಕಲಾ ಪೂಜಾರ್ ಇತರರು ಹಾಜರಿದ್ದರು.

## ಮಲೇಬೆನ್ನೂರಿನಲ್ಲಿ 3 ಸಾವಿರ ಜನರಿಂದ ಮಾನವ ಸರಪಳಿ



ಮಲೇಬೆನ್ನೂರು, ಸೆ.13- ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ನಾಡಿದ್ದು ದಿನಾಂಕ 15ರ ಭಾನುವಾರ ಬೆಳಿಗ್ಗೆ 8.30ಕ್ಕೆ ಕೊಮಾರನಹಳ್ಳಿಯಿಂದ ಮಲೇಬೆನ್ನೂರು ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದವರೆಗೆ 3 ಸಾವಿರ ಜನರಿಂದ ಉದ್ದದ ಮಾನವ ಸರಪಳಿ ಮಾಡಲಾಗುವುದೆಂದು ಪುರಸಭೆ ಮುಖ್ಯಾಧಿಕಾರಿ ಭಜಕ್ಕನವರ್ ತಿಳಿಸಿದರು.

ಅವರು, ಶುಕ್ರವಾರ ಇಲ್ಲಿನ ಪುರಸಭೆ ಸಭಾಂಗಣದಲ್ಲಿ ಕರೆದಿದ್ದ ಪುರಸಭೆ ಸದಸ್ಯರ ಹಾಗೂ ಸಾರ್ವಜನಿಕರ ಸಭೆಯಲ್ಲಿ ಪ್ರಜಾಪ್ರಭುತ್ವ ದಿನಾಚರಣೆಯ ಕಾರ್ಯಕ್ರಮಗಳ ಕುರಿತು ಚರ್ಚಿಸಿದರು.

ಪಟ್ಟಣದ ಎಲ್ಲಾ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು, ಶಿಕ್ಷಕರು, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ಮತ್ತು ವಿವಿಧ ಸಂಘಟನೆಗಳು, ಸಾರ್ವಜನಿಕರು ಶನಿವಾರ ನಡೆಯುವ ಪ್ರಜಾಪ್ರಭುತ್ವ ದಿನಾಚರಣೆಯಲ್ಲಿ ಭಾಗವಹಿಸಲಿದ್ದಾರೆ.

ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ಬಿ. ಮಂಜುನಾಥ್, ಖಲೀಲ್, ನಯಾಜ್, ಸಾಬೀರ್ ಅಲಿ, ಕೆ.ಜಿ.ಲೋಕೇಶ್, ಷಾ ಅಬ್ರಾರ್, ಬೆಣ್ಣೆಹಳ್ಳಿ ಸಿದ್ದೇಶ್, ದಾದಾಪೀರ್, ಟಿ.ಹನುಮಂತಪ್ಪ, ಬಿ. ವೀರಯ್ಯ, ಎ.ಆರೀಫ್ ಅಲಿ, ಬಸವರಾಜ್ ದೊಡ್ಮನಿ, ಎಕ್ಕೆಗೊಂದಿ ಕರಿಯಪ್ಪ, ಕೆ.ಪಿ. ಗಂಗಾಧರ್, ಚಮನ್ ಷಾ, ಭಾನುವಳ್ಳಿ ಸುರೇಶ್, ಓ.ಜಿ.ಕುಮಾರ್, ಜಿಗಳೇರ ಹಾಲೇಶಪ್ಪ, ಪೂಜಾರ್ ನಾರಾಯಣಪ್ಪ, ಎಂ.ಬಿ.ಫೈಜು, ಕಣ್ಣಾಳ್ ನಾಗರಾಜ್, ಪುರಸಭೆ ಅಧಿಕಾರಿಗಳಾದ ದಿನಕರ್, ನವೀನ್, ಶಿವರಾಜ್, ಮಂಜುನಾಥ್, ಇಮ್ರಾನ್ ಸೇರಿದಂತೆ ಇನ್ನೂ ಅನೇಕರು ಸಭೆಯಲ್ಲಿದ್ದರು.


**ಸೈಟ್, ಮನೆ, ಜಮೀನು ಅರ್ಧ (1/2 %) ಕಮಿಷನ್‌ಗೆ ಕೊಡಿಸುತ್ತೇನೆ, ಮಾರಿಸುತ್ತೇನೆ.**
ಕಿರಣ್ ಬೂಸ್ನೂರ್ (ಏಜೆಂಟ್)
98440 63409, 97315 63409
(ದಯವಿಟ್ಟು ನಿಮ್ಮ ಸ್ನೇಹಿತರಿಗೆ, ಬಂಧು-ಬಳಗದವರಿಗೆ ತಿಳಿಸಿರಿ)

**ಮನೆಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆ ಉತ್ತರ 30x40 (ಮೇಲೆ-ಕೆಳಗೆ) ಎಸ್.ಎಸ್. 'ಬಿ' ಬ್ಲಾಕ್ ದಕ್ಷಿಣ 30x40 (ಡುಪ್ಲೆಕ್ಸ್) ವಿದ್ಯಾನಗರ ಪೂರ್ವ 40x70 (ಡುಪ್ಲೆಕ್ಸ್)
ಐಗೂರು ವಿಜಯಕುಮಾರ್
99457 02495

**WANTED**
Vet Doctor To Work in Sri Bhagwan Mahaveer Goushala, Avaragere, Davangere.
Contact : NITIN JAIN
94480 33734

**ಸೈಟುಗಳು ಮಾರಾಟಕ್ಕಿವೆ**
ಹದಡಿ ರಸ್ತೆ, ಶಿರಮಗೊಂಡನಹಳ್ಳಿ ಸುತ್ತ-ಮುತ್ತ 30x50 ಪಶ್ಚಿಮ ಅಕ್ಕ-ಪಕ್ಕ, 30x46 ಪೂರ್ವ ಅಕ್ಕ-ಪಕ್ಕ, 30x50 ಪೂರ್ವ, 30x40 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ಹಳೇ ಬನಶಂಕರಿ ಬಡಾವಣೆ ಪೂರ್ವ ಮತ್ತು ಪಶ್ಚಿಮ (ಹಿಂದೆ-ಮುಂದೆ) (ಎರಡು ಕಡೆ ರೋಡ್) 40x45 (4 ಸೈಟುಗಳು) ಪಶ್ಚಿಮ 40x70 (ಅಕ್ಕ-ಪಕ್ಕ) ಪೂರ್ವ 30x50, 40x60 (ಅಕ್ಕ-ಪಕ್ಕ) ಶಿವ-ಪಾರ್ವತಿ ಪಶ್ಚಿಮ 30x55, 30x40 ಹೊಸ ಕುಂದುವಾಡ ಪೂರ್ವ 30x40, 30x50.
ಐಗೂರು ವಿಜಯಕುಮಾರ್
99457 02495

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**MEDICAL REPRESENTATIVE JOB IS REQUIRED FOR ME**
My present salary package is 4.85 l per annum. 13 years pharma experience. Contact :
99642 79238

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ದಿ. : 01.10.2024 to 08.10.2024ರ ವರೆಗೆ 7 ದಿನಗಳ ದಕ್ಷಿಣ ಭಾರತದ ಪ್ರವಾಸ ಮಧುರೈ, ಪಳನಿ, ರಾಮೇಶ್ವರ, ಕನ್ಯಾಕುಮಾರಿ
ಕೇವಲ 15 ಸೀಟುಗಳಿವೆ ಆಸಕ್ತಿಯುಳ್ಳವರು ಕರೆಮಾಡಿ.
90086 26473, 94485 33928

**ಹುಡುಗರು ಬೇಕಾಗಿದ್ದಾರೆ**
SSLC., ITI or Diploma ಪಾಸ್ / ಫೇಲ್ ಅಭ್ಯರ್ಥಿಗಳು ಸಿಸಿಟಿವಿ ಕೆಲಸಕ್ಕೆ, ಎಲೆಕ್ಟ್ರೀಷಿಯನ್ ಬೇಕಾಗಿದ್ದಾರೆ. ನಗರವಾಸಿಗಳಿಗೆ ಮೊದಲ ಆದ್ಯತೆ.
8722113803, 9611877204

**ಮನೆ ಬಾಡಿಗೆಗೆ ಇದೆ**
ಶ್ರೀ ಜೆ.ಹೆಚ್. ಪಟೇಲ್ ಬಡಾವಣೆ, 'ಸಿ' ಬ್ಲಾಕ್, ಶಾಮನೂರು ಹತ್ತಿರ, First floor 30x40, 2 BHK, Second Floor - Room- ಅಟ್ಯಾಚ್ಡ್ ಬಾತ್ ರೂಮ್
98863 84948

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು 18-35 ವರ್ಷದೊಳಗಿನ ಹುಡುಗರು, ಹುಡುಗಿಯರು ಬೇಕಾಗಿದ್ದಾರೆ.
ಸಂಪರ್ಕಿಸಿ : ಆಮಂತ್ರಣ
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
ಮೊ. 97400-01117

**REQUIRED**
Computer Faculty - 02 ( BCA/B.Sc - Cs/ B.E - Cs) or any Graduation/Post Graduate with One Year Computer Teacher Training Course as qualified with Good Technical & Communication Skill with Fluency English (as per age 21-40 years with 1-5 years Experience) Contact: SITEC, Davangere
99015 18252, 81230 26043

**ಉತ್ತರ ದಿಕ್ಕಿನ ಮನೆಗಳು ಮಾರಾಟಕ್ಕಿವೆ**
ಆಂಜನೇಯ ಬಡಾವಣೆ 18ನೇ ಕ್ರಾಸ್ ನಲ್ಲಿ, ಪೂರ್ವ-ಉತ್ತರ ದಿಕ್ಕಿನ ನಿವೇಶನದಲ್ಲಿ ಕಟ್ಟಿರುವ, ಉತ್ತರ ಬಾಗಿಲುಳ್ಳ 15 × 45 ಅಳತೆಯ ಮೂರು ಅಂತಸ್ತಿನಲ್ಲಿ ಕಟ್ಟಿರೋ ಮೂರು ಮನೆಗಳು ಮಾರಾಟಕ್ಕಿವೆ.
ಆಸಕ್ತರು ಮಾತ್ರ ಸಂಪರ್ಕಿಸಿ :
9353434545, 9845216749
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**WANTED**
Typist/Receptionist for Scanning Diagnostic Centre in Davangere.
Qualification Preferably BSc., Contact :
94819 09848

**ಮನೆ ಬಾಡಿಗೆಗೆ ಇದೆ**
1 BHK, ನಂ. 164, 10ನೇ ಕ್ರಾಸ್, ಎ ಬ್ಲಾಕ್, ದೇವರಾಜ್ ಅರಸ್ ಬಡಾವಣೆ, ದಾವಣಗೆರೆ.
(ಸಸ್ಯಹಾರಿಗಳಿಗೆ ಮಾತ್ರ)
90351 09371

**ಕೆಲಸಕ್ಕೆ ಬೇಕಾಗಿದ್ದಾರೆ**
ರಿಲಯನ್ಸ್‌ನಲ್ಲಿ ಲೈಫ್ ಪ್ಲಾನಿಂಗ್ ಆಫೀಸರ್ ಹುದ್ದೆಗೆ ಮಹಿಳೆಯರು ಬೇಕಾಗಿದ್ದಾರೆ.
ಬಿಐಸಿಸಿ ಅವಿನ್ಯೂ, 2ನೇ ಮಹಡಿ, ಎವಿಕೆ ಕಾಲೇಜ್ ರಸ್ತೆ, ಚೇತನ ಹೋಟೆಲ್ ಎದುರು, ದಾವಣಗೆರೆ.
98440 98800

**2BHK ಮನೆ ಮತ್ತು ರೂಮ್ ಬಾಡಿಗೆಗಿದೆ**
KSRTC Bus Stand ಹಿಂಭಾಗ ವೀಣಾ ಕ್ಲಿನಿಕ್ ರೋಡ್, 2ನೇ ಕ್ರಾಸ್, ದಾವಣಗೆರೆ.
81059 11293, 98455 59844

**DUPLEX HOUSE FOR RENT**
40 × 60 fully furnished 5 BHK Duplex house, 4 attached washroom including Corporation water & Borewell water. (Only for Veg)
Vidyanagar last city bus stop, Davangere
8951938228, 8050222181

**2 BHK HOUSE FOR RENT**
Specious, as per Vastu Constructed Double Bed Rooms House In 1st Floor, Near Vidyanagara, 1st Bus stop Davangere. (Veg Only)
63615 93954

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಎಗ್ ಸೆಂಟರ್
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ.
96860 22969

**SKYNET SYSTEMS**
ಕಂಪ್ಯೂಟರ್ ಕೇವಲ 9999/- ರಿಂದ ಪ್ರಾರಂಭ
Warranty ಜೊತೆ
Free Service
85535 39398

**ಸೈಟು ಮಾರಾಟಕ್ಕಿದೆ**
ಹರಿಹರದಲ್ಲಿ ನ್ಯೂ ಅಮರಾವತಿ ಬಡಾವಣೆ, (ಮದರ್ ಥೆರೇಸಾ ಅನಾಥಾಶ್ರಮ ಎದುರಿಗೆ) 40x50 ಪೂರ್ವ ಮತ್ತು ಉತ್ತರ ದಿಕ್ಕಿಗೆ, ಕಾರ್ನರ್ ಸೈಟ್ ಮಾರಾಟಕ್ಕಿದೆ.
98449 81223

**WANTED**
CIVIL ENGINEER'S
Freshers or with 2-3 years Experienced. Projects at Bangalore and Davangere.
80880 50729, 89711 03671

**ಬೇಕಾಗಿದ್ದಾರೆ**
ಕಾರ್‌ವಾಷ್, ವೀಲ್ ಅಲೈನ್‌ಮೆಂಟ್ & ಬ್ಯಾಲೆನ್ಸಿಂಗ್ ಮಾಡಲು ಬೇಕಾಗಿದ್ದಾರೆ. ಆಕರ್ಷಕ ಸಂಬಳವಿರುತ್ತದೆ. ಸಂಪರ್ಕಿಸಿ :
ಕಾರ್ ಕೇರ್, ದಾವಣಗೆರೆ.
9538196395, 9448639815

**ಜ್ಯೂಯಲರಿ ಶಾಪ್‌ನಲ್ಲಿ ಕೆಲಸ ಮಾಡಲು ಹುಡುಗ ಬೇಕಾಗಿದ್ದಾರೆ**
ದಾವಣಗೆರೆಯಲ್ಲಿ ಜ್ಯೂಯಲರಿ ಶಾಪ್‌ನಲ್ಲಿ ಸೇಲ್ಸ್‌ಮೇನ್ ಕೆಲಸಕ್ಕಾಗಿ ಹುಡುಗ ಬೇಕಾಗಿದ್ದಾರೆ. ವಿದ್ಯಾರ್ಹತೆ 10ನೇ ತರಗತಿ ಪಾಸಾಗಿರಬೇಕು. ದಾವಣಗೆರೆಯಲ್ಲಿ ನೆಲೆ ಇರುವವರಿಗೆ ಆದ್ಯತೆ. ಸಂಪರ್ಕಿಸಿ :
88619 94260

**LAND, DAIRY & POULTRY LEASE/RENT**
Land of 40 acres including Dairy, Poultry is available for Lease or Rent.
60 kms away from Davangere.
93806 10220

**SMART CITY CABS DAVANAGERE**
Minimum 4 km Rs - 99/-
Above per km Rs - 25/-
waiting charges per hours Rs - 100/- and 24 service will be available.
Ph : 08192 255555
94811 79933, 99868 18205

**FOR RENT**
3 BHK HOUSE - 1st Floor
OFFICE - Ground Floor
ROOM - 2nd Floor
Shivakumarswamy Layout, Davangere.
86602 14677

**13ನೇ ವರ್ಷದ ವಾರ್ಷಿಕ ಮಹೋತ್ಸವ**
ದಿನಾಂಕ 14.09.2024 ರಿಂದ 16.09.2024
ದಾನೇಶ್ ಅಕ್ವೇರಿಯಂ
3 ದಿನಗಳ ಕಾಲ 50% ಭಾರೀ ರಿಯಾಯಿತಿ ಮಾರಾಟ
ಅಲಂಕಾರಿಕ ಮೀನುಗಳು ಹಾಗೂ ಗೃಹಾಲಂಕಾರಿಕ ವಸ್ತುಗಳ ಪ್ರದರ್ಶನ ಮತ್ತು ಮಾರಾಟ.. ಮರೆಯಬೇಡಿ ಮರೆತು ನಿರಾಶರಾಗಬೇಡಿ..
ವಿಳಾಸ : ಕೆಟಿಜೆ ನಗರ, 8ನೇ ಕ್ರಾಸ್ ನಿಟುವಳ್ಳಿ ರಸ್ತೆ, ದಾವಣಗೆರೆ.
98453 70694

**ಕೃಷಿ ಟಾರ್ಪಾಲಿನ್**
ಹನಗವಾಡಿ ಕೈಗಾರಿಕಾ ಪ್ರದೇಶ NH4, ಹರಿಹರ.
ವಿಶೇಷ ಪ್ರಾರಂಭಿಕ ದರ KG ಗೆ
HDPE ISO Black Rs. 130/-
HDPE ISI Black Rs. 250/-
91082 11555


**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು


**ಕೆಲಸಕ್ಕೆ ಬೇಕಾಗಿದ್ದಾರೆ**
ಎಂ.ಎನ್. ಏಜೆನ್ಸೀಸ್
ಅಕೌಂಟೆಂಟ್ಸ್, ಟ್ಯಾಲಿ ಅನುಭವವಿರುವ ಮಹಿಳೆ ಹಾಗೂ ಪುರುಷರು, ಸೂಪರ್‌ವೈಸಿಂಗ್ ಕೆಲಸಕ್ಕೆ ಮಹಿಳೆ ಹಾಗೂ ಪುರುಷರು ಡಿಗ್ರಿ ಹಾಗೂ ಸೇಲ್ಸ್ ಮಾರ್ಕೆಟಿಂಗ್ ಆಗಿರುವವರು ಬೇಕಾಗಿದ್ದಾರೆ.
9036611313, 9632757065

**ರಕ್ತ ದಾನ ಶ್ರೇಷ್ಠ ದಾನ**

**ಷೇರು ಮಾರುಕಟ್ಟೆ ಬಗ್ಗೆ ತರಬೇತಿ ನೀಡಲಾಗುವುದು**
ಷೇರು ಮಾರುಕಟ್ಟೆಯ ಬಗ್ಗೆ ವಿವರವಾಗಿ ತರಗತಿ/ ಕೋಚಿಂಗ್ ನೀಡುವುದರ ಮೂಲಕ ಕಡಿಮೆ ಅವಧಿಯಲ್ಲಿ ನಿಮಗೆ ಹೂಡಿಕೆ ಹಾಗೂ ಒಬ್ಬ ಒಳ್ಳೆಯ ಟ್ರೇಡರ್ ಆಗಲು ತರಬೇತಿ ನೀಡಲಾಗುವುದು.
99026 63560, 91088 05150

**HOUSE FOR LEASE / RENT**
2 BHK- 30x50, 2nd floor 5 th cross, Mahalakshmi Badavane, Behind Shivgange choultry, DVG.
99809 33002

**2 BEDROOM HOUSE**
Available for rent Near to Schools & Colleges in Taralabalu Badavane.
94489 24389

**ಗಾಂಧಾರಿ ವಿದ್ಯೆ ದಾವಣಗೆರೆ**
The Power of Sixth Sense Institution 3rd Eye Program 6 ರಿಂದ 16 ವರ್ಷ ವಯೋಮಿತಿ ಮಕ್ಕಳಿಗೆ.
ವನಿತ : 78928 25328
ಸಂಪ್ರೀತ 96320 60242

**ಸೈಟ್, ಮನೆ, ಹೊಲ ಬೇಕಾದಲ್ಲಿ ಸಂಪರ್ಕಿಸಿ**
ಸರ್ಕಾರಿ ನೌಕರರ ಬಡಾವಣೆ 'B' ಬ್ಲಾಕ್‌ನಲ್ಲಿ 30x40 ಪೂರ್ವ ಅಕ್ಕ-ಪಕ್ಕ ಮತ್ತು ಪಶ್ಚಿಮಕ್ಕೆ ಸೈಟ್‌ಗಳು, 30x50 ಪೂರ್ವ ಮತ್ತು ಉತ್ತರ ಸೈಟುಗಳು, ಬನಶಂಕರಿ ಬಡಾವಣೆಯಲ್ಲಿ 40x70 ಪಶ್ಚಿಮ ಶಿವ-ಪಾರ್ವತಿಯಲ್ಲಿ 40x60 ಪೂರ್ವ ಸೈಟುಗಳು ಮಾರಾಟಕ್ಕೆ ಇವೆ. ಸಂಪರ್ಕಿಸಿ :
ಸುರೇಶ್ ಪಿ.ಎಸ್. ಶಾಮನೂರು (ಪ್ರಾಪರ್ಟಿ ಅಡ್ವೈಸರ್)
84314 00907

**WANTED**
PUC or Degree Pass or Fail Computer Knowledge is must
EXCELLENT ELECTRONICS
# 2137/1, 4th Main, 3rd Cross, MCC `A' Block, Davangere - 577 002.
Contact No.
98865 15100

**ಮಳಿಗೆಗಳು ಬಾಡಿಗೆಗೆ ಇವೆ**
ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ಶ್ರೀ ಕಲ್ಲೇಶ್ವರ ಬಿಲ್ಡಿಂಗ್, 1ನೇ ಮಹಡಿ, 2ನೇ ಮಹಡಿ, ಸೆಲ್ಲರ್ ಮಹಡಿ, 1100 Sq.ft., ಲಿಫ್ಟ್ ಸೌಲಭ್ಯ, ATMಗೆ ಜಾಗ
99646 99096

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಮನೆ ಬಾಡಿಗೆಗೆ ಇದೆ**
ದಿನೇಶ್‌ಕುಮಾರ್, # 2134/4, KSRT ಬಸ್‌ಸ್ಟ್ಯಾಂಡ್ ಹಿಂಭಾಗ, ಭಗತ್‌ಸಿಂಗ್ ನಗರ, ದಾವಣಗೆರೆ-2.
86188 34998
97418 12455

**ಮನೆ ಬಾಡಿಗೆಗೆ**
1ನೇ ಮಹಡಿ, ಡಬಲ್ ಬೆಡ್ ರೂಂ ಸಸ್ಯಹಾರಿಗಳಿಗೆ ಮಾತ್ರ 1638/9, "ನನ್ನಮ್ಮ" ತರಳಬಾಳು ಬಡಾವಣೆ, ದಾವಣಗೆರೆ.
99000 94783

**ROOM TO LET**
Well furnished with attached bath room for rent at Vidyanagara.
Contact :
63615 93954

**ಮನೆ ಮಾರಾಟಕ್ಕಿದೆ**
ಕುಂಬಳೂರು, ಹರಿಹರ ತಾ।। ಶಿವಮೊಗ್ಗ - ಹರಿಹರ ರಸ್ತೆ, ನಿಟ್ಟೂರು ಕ್ರಾಸ್‌ನಲ್ಲಿ ನೂತನವಾಗಿ ನಿರ್ಮಿಸಿರುವ ಉತ್ತರ ದಿಕ್ಕಿನ ಮನೆ (36'x68') ಮತ್ತು ಹಳೆ ಮನೆ (36' x 20') ಮಾರಾಟಕ್ಕೆ ಇದೆ. ಒಟ್ಟು ಜಾಗದ ಅಳತೆ : 36'x88'
7892587685, 9739903499

**ಮನೆ ಬಾಡಿಗೆಗೆ ಇದೆ**
1 BHK, ಗ್ರೌಂಡ್ ಫ್ಲೋರ್ # 3893, 1ನೇ ಕ್ರಾಸ್, ವಿದ್ಯಾನಗರ ಕೆನರಾ ಬ್ಯಾಂಕ್ ಎದುರು, ದಾವಣಗೆರೆ.
98802 10699

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10 CBSE / ICSE Boards, NEET / IIT - JEE / Olympiads Memory Techniques + Hand Writing
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB NEET / IIT - JEE / KCET / CLAT - Printed Notes + Study Materials
97398 65711, 94822 44114

**ಮನೆ ಮಾರಾಟಕ್ಕಿದೆ**
ದಾವಣಗೆರೆ ಸರಸ್ವತಿ ನಗರದಲ್ಲಿ 30x45 ಅಳತೆಯಲ್ಲಿ ಪಶ್ಚಿಮಾಭಿಮುಖವಾಗಿ ಕಟ್ಟಿರುವ 3 BHK ಡುಪ್ಲೆಕ್ಸ್ ಮನೆ ಮಾರಾಟಕ್ಕಿದೆ. ದರ 1 ಕೋಟಿ 10 ಲಕ್ಷಗಳು (ನೆಗೋಷಿಯಲ್) (ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
99454 92913

## ಸಂವಿಧಾನ, ಪ್ರಜಾಪ್ರಭುತ್ವಕ್ಕೆ ಆತಂಕ ಒಡ್ಡುವ ಪ್ರಯತ್ನಕ್ಕೆ ಖಂಡನೆ

ದಾವಣಗೆರೆ, ಸೆ. 13- ಸಂವಿಧಾನ ಉಳುವಿಗಾಗಿ ನಾಳೆ ದಿನಾಂಕ 14 ರ ಶನಿವಾರ ಬೆಂಗಳೂರಿನ ಕೆ.ಆರ್. ಪುರಂನಲ್ಲಿರುವ ಯುವಿಸಿಇ ಅಲ್ಯೂಮ್ನಿ ಹಾಲ್‌ನಲ್ಲಿ 'ಸಂಚಲನಾ ಸಮಾವೇಶ' ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟ ಉಳಿಸಿ ಆಂದೋಲನದ ಪ್ರಮುಖರಾದ ಪ್ರೊ.ಜಿ.ಎಸ್. ಸಿದ್ಧರಾಮಯ್ಯ ಅವರು ನಿನ್ನೆ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

**ಒಕ್ಕೂಟ ಉಳಿಸಿ ಆಂದೋಲನದ ಪ್ರಮುಖರಾದ ಪ್ರೊ.ಜಿ.ಎಸ್. ಸಿದ್ಧರಾಮಯ್ಯ**

ರಾಜ್ಯಗಳ ಅಸ್ಮಿತೆ, ಹಕ್ಕು, ಪಾಲಿನ ರಕ್ಷಣೆ, ಪ್ರಜಾಸತ್ತೆ, ಸಂವಿಧಾನ ಉಳಿವಿಗಾಗಿ ರಾಷ್ಟ್ರೀಯ ಅಭಿಯಾನ ನಡೆಸಲಾಗುವುದು. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸಮಾವೇಶ, ಅಭಿಯಾನದ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

14 ರಂದು ಬೆಂಗಳೂರಿನಲ್ಲಿ ನಡೆಯುವ ಸಂಚಲನಾ ಸಮಾವೇಶದ ಅಧ್ಯಕ್ಷತೆಯನ್ನು ಸುಪ್ರೀಂ ಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ ಗೋಪಾಲಗೌಡರು ವಹಿಸುವರು. ಉಚ್ಛ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ನಾಗಮೋಹನ್ ದಾಸ್, ಖ್ಯಾತ ಚಿಂತಕರೂ, ಸಾಹಿತಿಗಳಾದ ದೇವನೂರು ಮಹದೇವ, ಪ್ರೊ. ರವಿವರ್ಮಕುಮಾರ್, ಜಿ. ರಾಮಕೃಷ್ಣ ಮತ್ತಿತರರು ಪಾಲ್ಗೊಳ್ಳಲಿದ್ದಾರೆಂದು ತಿಳಿಸಿದರು.

ಕಳೆದ ಹತ್ತು ವರ್ಷಗಳಿಂದ ಬಹುತ್ವ ಭಾರತದ ಅಸ್ಮಿತೆಗಳಾಗಿರುವ ಭಾಷೆ, ಸಂಸ್ಕೃತಿ, ಧರ್ಮ ವಿನಾಶ ಮಾಡುವ ಕೆಲಸಗಳು ನಡೆಯುತ್ತಿವೆ. ಸಂವಿಧಾನ, ಪ್ರಜಾಪ್ರಭುತ್ವಕ್ಕೆ ಆತಂಕ ಒಡ್ಡುವ ಪ್ರಯತ್ನಗಳು ನಡೆದಿದ್ದರೂ ಸಂವಿಧಾನ, ಪ್ರಜಾತಂತ್ರ ವ್ಯವಸ್ಥೆ ಬಲವಾಗಿದೆ. ಇದೇ ಸ್ಥಿತಿ ಮುಂದುವರೆದಲ್ಲಿ ಸಂವಿಧಾನ, ಪ್ರಜಾಪ್ರಭುತ್ವ, ಗಣತಂತ್ರ ವ್ಯವಸ್ಥೆಗೆ ಧಕ್ಕೆ ಉಂಟಾಗುವುದನ್ನು ತಪ್ಪಿಸುವ ಉದ್ದೇಶದಿಂದ ಪ್ರಜಾಸತ್ತೆ, ಸಂವಿಧಾನ ಉಳಿವಿಗಾಗಿ ರಾಷ್ಟ್ರೀಯ ಅಭಿಯಾನ ಹಮ್ಮಿಕೊಳ್ಳಲಾಗುತ್ತಿದೆ ಎಂದು ಹೇಳಿದರು.

ಸುಳ್ಳನ್ನೇ ಪದೇ ಪದೇ ಹೇಳುವ ಮೂಲಕ ಸತ್ಯ ಎಂದು ಹೇಳುವ ಪ್ರಯತ್ನ ನಡೆಸಲಾಗುತ್ತಿದೆ. ಒಂದು ದೇಶ, ಒಂದು ಭಾಷೆ, ಒಂದು ಸಂಸ್ಕೃತಿ ಎಂಬ ಏಕಾತ್ಮಕತೆಯ ದೃಷ್ಟಿ ಹೊಂದಿರುವ ಕೇಂದ್ರ ಸರ್ಕಾರ ಬಹುತ್ವ ಭಾರತ ನಾಶ ಮಾಡುವ, ಸಂವಿಧಾನದ ಆಶಯಗಳನ್ನೇ ಹಿಸುಕಿ ಹಾಕುವ ಯತ್ನದಲ್ಲಿದೆ. ರಾಜ್ಯದಲ್ಲಿ ವಿವಿಧ ಪಕ್ಷಗಳು ಅಧಿಕಾರ ನಡೆಸುವ ಸಂದರ್ಭದಲ್ಲಿ ರಾಜ್ಯಪಾಲರ ಮೇಲೆ ಒತ್ತಡ ಹೇರಿ ರಾಜ್ಯಪಾಲರ ಕಚೇರಿಯನ್ನೇ ದುರ್ಬಳಕೆ ಮಾಡಿಕೊಳ್ಳುವ ಮೂಲಕ ಜನಬೆಂಬಲ ಹೊಂದಿರುವ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾಗಿರುವ ಸರ್ಕಾರವನ್ನೇ ಕಿತ್ತು ಹಾಕುವ ಕುತಂತ್ರ ನಡೆಸುತ್ತಿದೆ ಎಂಬುದಕ್ಕೆ ದೆಹಲಿ ಹಾಗೂ ಇತ್ತೀಚಿಗೆ ಕರ್ನಾಟಕದಲ್ಲಿ ನಡೆಯುತ್ತಿರುವ ವಿದ್ಯಮಾನಗಳೇ ಸಾಕ್ಷಿ ಎಂದರು.

ಒಕ್ಕೂಟ ಉಳಿಸಿ ಆಂದೋಲನದ ಜಾಣಗೆರೆ ವೆಂಕಟರಾಮಯ್ಯ, ರುದ್ರಪ್ಪ ಹನಗವಾಡಿ, ಎಂ.ಟಿ. ಸುಭಾಷ್ಚಂದ್ರ, ಪ್ರೊ.ಎ.ಬಿ. ರಾಮಚಂದ್ರಪ್ಪ, ಬಿ. ವೀರಣ್ಣ, ನಿರಂಜನ ಮತ್ತು ಇತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ರಾಹುಲ್ ಹೇಳಿಕೆ ಖಂಡಿಸಿ ಇಂದು ಬಿಜೆಪಿ ಎಸ್ಸಿ ಮೋರ್ಚಾ ಪ್ರತಿಭಟನೆ

ದಾವಣಗೆರೆ, ಸೆ.13- ಮೀಸಲಾತಿ ವಿರೋಧಿ ಹೇಳಿಕೆ ನೀಡಿರುವ ಕಾಂಗ್ರೆಸ್ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ನಿಲುವು ಖಂಡಿಸಿ ನಗರದ ಅಂಬೇಡ್ಕರ್ ವೃತ್ತದಲ್ಲಿ ನಾಳೆ ದಿನಾಂಕ 14ರ ಶನಿವಾರ ಬೆಳಿಗ್ಗೆ 10ಕ್ಕೆ ಪ್ರತಿಭಟನೆ ನಡೆಸಲಿದ್ದೇವೆ ಎಂದು ಬಿಜೆಪಿ ಎಸ್ಸಿ ಮೋರ್ಚಾದ ರಾಜ್ಯ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಭಾರತ ದೇಶದ ಪ್ರಜೆ ಎಂಬುದನ್ನೇ ಮರೆತು ಮೀಸಲಾತಿ ವಿರೋಧಿ ಹೇಳಿಕೆ ನೀಡಿದ ರಾಹುಲ್ ಗಾಂಧಿ ಅವರನ್ನು ಸಂಸತ್ತಿನ ಸದಸ್ಯ ಸ್ಥಾನದಿಂದ ಅನರ್ಹ ಗೊಳಿಸಬೇಕೆಂದು ಆಗ್ರಹಿಸಿದರು.

ಮಾಜಿ ಶಾಸಕ ಬಸವರಾಜ ನಾಯ್ಕ ಮಾತನಾಡಿದರು. ಎಸ್ಸಿ ಮೋರ್ಚಾದ ಜಿಲ್ಲಾಧ್ಯಕ್ಷ ಕೃಷ್ಣ ಕುಮಾರ್, ಎಸ್ಸಿ ಮೋರ್ಚಾದ ಮಂಜನಾಯ್ಕ, ಜಿ.ಗಂಗಾಧರ್, ಸುರೇಶ್, ರಮೇಶ್, ಶಿವಕುಮಾರ್ ಸುದ್ದಿಗೋಷ್ಠಿಯಲ್ಲಿದ್ದರು.

# 22 ಕೆರೆಗಳಿಗೆ ಡಿ.ಐ. ಪೈಪ್ ಬಳಸಿ ಕೊಳವೆ ಮಾರ್ಗ

## ಜಿಲ್ಲೆಯ ಎಲ್ಲಾ ಕೆರೆಗಳನ್ನು ತುಂಬಿಸಲು ಯೋಜನೆ : ರೈತ ಹುತಾತ್ಮರ ದಿನಾಚರಣೆ ಸಮಾರಂಭದಲ್ಲಿ ಎಸ್ಸೆಸ್ಸೆಂ

ದಾವಣಗೆರೆ, ಸೆ. 13 - ದೀರ್ಘಕಾಲ ಬಾಳಿಕೆಗೆ ಬರುವ ಡಿ.ಐ. ಪೈಪ್‌ಗಳನ್ನು ಬಳಸಿ 22 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಕೊಳವೆ ಮಾರ್ಗವನ್ನು ಮರು ಅಳವಡಿಕೆ ಮಾಡಲಾಗುವುದು. ಇದರಿಂದ ಪೈಪ್‌ಗಳು ಒಡೆಯುವ ಸಮಸ್ಯೆ ಬಗೆಹರಿಯಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಹೇಳಿದ್ದಾರೆ.

ಆನಗೋಡಿನ ಉಳುಪಿನ ಕಟ್ಟೆ ಕ್ರಾಸ್ ಬಳಿ ಹುತಾತ್ಮ ರೈತರಾದ ಓಬೇನಹಳ್ಳಿ ಕಲ್ಲಿಂಗಪ್ಪ ಹಾಗೂ ಸಿದ್ದನೂರು ನಾಗರಾಜಾಚಾರ್ ಅವರ ಸಮಾಧಿ ಬಳಿ ಆಯೋಜಿಸಲಾಗಿದ್ದ 32ನೇ ವರ್ಷದ ರೈತ ಹುತಾತ್ಮರ ದಿನಾಚರಣೆ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಈಗಿರುವ ಕೊಳವೆ ಮಾರ್ಗ ಕಳಪೆಯಾಗಿದೆ. ಒಮ್ಮೆಲೇ ಎರಡು ಮೋಟರ್‌ಗಳನ್ನು ಆನ್ ಮಾಡಿದರೆ ಎಲ್ಲಾ ಪೈಪ್‌ಗಳು ಒಡೆದು ಹೋಗಲಿವೆ. ಹೀಗಾಗಿ ಹೊಸ ಪೈಪ್‌ಗಳನ್ನು ಅಳವಡಿಸುವ ಅಗತ್ಯವಿದೆ ಎಂದು ಸಚಿವರು ಹೇಳಿದರು.

22 ಕೆರೆಗಳಿಗೆ ನೀರು ತುಂಬಿಸುವ ಯೋಜನೆಯ 18 ಕೋಟಿ ರೂ. ಹಣ ಬಾಕಿ ಇದೆ. ಇದನ್ನು ಬಳಸಿಕೊಂಡು ಡಿ.ಐ. (ಡಕ್ಟೈಲ್ ಐರನ್) ಪೈಪ್ ಅಳವಡಿಸಲಾಗುವುದು. ಮೊದಲ ಹಂತದಲ್ಲಿ ಮೊದಲ ಜಾಕ್‌ವೆಲ್‌ವರೆಗೆ ಪೈಪ್ ಅಳವಡಿಕೆ ಮಾಡಲಾಗುವುದು. ನಂತರದಲ್ಲಿ ಹಂತ ಹಂತವಾಗಿ ಉಳಿದ ಮಾರ್ಗದಲ್ಲೂ ಡಿ.ಐ. ಪೈಪ್‌ಗಳ ಅಳವಡಿಕೆ ಮಾಡಲಾಗುವುದು ಎಂದು ಸಚಿವರು ಹೇಳಿದರು.

ಈ ಪೈಪ್‌ಗಳು ತುಕ್ಕು ಹಿಡಿಯುವುದಿಲ್ಲ, ಗಟ್ಟಿಯಾಗಿರುತ್ತವೆ. ನೀರಿನ ಹರಿವಿಗೆ ಯಾವುದೇ ತೊಂದರೆಯಾಗುವುದಿಲ್ಲ. ಇದು ದೀರ್ಘಾವಧಿಗೆ ಪರಿಹಾರವಾಗಲಿದೆ ಎಂದು ಸಚಿವರು ಹೇಳಿದರು.

ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆಗೆ ಇದ್ದ ಜಮೀನು ವಿವಾದ ಬಗೆಹರಿಸಲಾಗಿದೆ. ಶೀಘ್ರದಲ್ಲೇ ಉಪ ಮುಖ್ಯಮಂತ್ರಿ ಹಾಗೂ ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ಅವರನ್ನು ಜಿಲ್ಲೆಗೆ ಕರೆಸಿ, ಇಲ್ಲಿನ ಎಲ್ಲಾ ಏತನೀರಾವರಿ ಯೋಜನೆಗಳ ಕುರಿತು ಚರ್ಚಿಸಿ ಎಲ್ಲ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಾಗುವುದು ಎಂದರು.

ಜಿಲ್ಲೆಯ ಎಲ್ಲಾ ಕೆರೆಗಳನ್ನು ತುಂಬಿಸಲು ಯೋಜನೆ ರೂಪಿಸಲಾಗುವುದು. ಒಂದು ಬಾರಿ ಕೆರೆಗಳು ತುಂಬಿದರೆ 2-3 ವರ್ಷ ರೈತರಿಗೆ ನೆರವಾಗುತ್ತದೆ ಎಂದು ಹೇಳಿದರು.

ಉಳುಪಿನಕಟ್ಟೆಯಲ್ಲಿ ರೈತ ಹುತಾತ್ಮ ಭವನ ನಿರ್ಮಾಣಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು. ಈ ಯೋಜನೆಗೆ ಸರ್ಕಾರದಿಂದ ಅನುದಾನ ದೊರಕಿಸಿ ಕೊಡುವ ಜೊತೆಗೆ ವೈಯಕ್ತಿಕವಾಗಿಯೂ ನೆರವು ನೀಡುವುದಾಗಿ ಸಚಿವ ಎಸ್ಸೆಸ್ಸೆಂ ಭರವಸೆ ನೀಡಿದರು.

### ಎಸ್ಸೆಸ್ಸೆಂ 3 ಸಾವಿರ ಎಕರೆಯ ರೈತ: ಪುಟ್ಟಸ್ವಾಮಿ

**ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರೂ ರೈತರಾಗಿದ್ದಾರೆ. ಅವರು 3 ಸಾವಿರ ಎಕರೆಯ ರೈತರಾಗಿದ್ದು ಹೆಚ್ಚು ಅನುಭವ ಹೊಂದಿದ್ದಾರೆ ಎಂದು ರೈತ ಹುತಾತ್ಮರ ಸ್ಮರಣಾರ್ಥ ಸಮಿತಿ ಅಧ್ಯಕ್ಷ ಎನ್. ಜಿ. ಪುಟ್ಟಸ್ವಾಮಿ ಹೇಳಿದರು.**

**ಮಲ್ಲಿಕಾರ್ಜುನ್ ಅವರು ಅಡಿಕೆ ಹಾಗೂ ಕಾಫಿ ಸೇರಿದಂತೆ ಹಲವು ಬೆಳೆಗಳನ್ನು ಬೆಳೆದಿದ್ದು, ಕೃಷಿಯ ಬಗ್ಗೆ ಅನುಭವ ಹೊಂದಿದ್ದಾರೆ. ರೈತರ ಒಡನಾಟವಿದೆ ಎಂದರು.**

ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಮಾತನಾಡಿ, ಭದ್ರಾ ಮೇಲ್ದಂಡೆ ಯೋಜನೆ ಜಾರಿಯ ಕುರಿತು ಸಂಸತ್ತಿನಲ್ಲಿ ಈ ಹಿಂದೆ ಪ್ರಸ್ತಾಪಿಸಿದ್ದೆ. ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಗಳ ಜೊತೆಗೂಡಿ ಈ ಯೋಜನೆ ಜಾರಿಗಾಗಿ ಕೇಂದ್ರದಲ್ಲಿ ಒತ್ತಡ ಹೇರುವುದಾಗಿ ಹೇಳಿದರು.


ರೈತ ಹುತಾತ್ಮ ಭವನ ನಿರ್ಮಿಸುವ ಸಲುವಾಗಿ ಸಂಸದರ ನಿಧಿಯಿಂದ ನೆರವು ನೀಡುವುದಾಗಿ ಭರವಸೆ ನೀಡಿದ ಅವರು, ಈ ಸಮುದಾಯ ಭವನಕ್ಕೆ ಸಂಬಂಧಿಸಿದ ಸಮಿತಿಯಲ್ಲಿ ರೈತ ಮಹಿಳಾ ಪ್ರತಿನಿಧಿಗಳಿಗೂ ಅವಕಾಶ ನೀಡಬೇಕು ಎಂದು ತಿಳಿಸಿದರು.

ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದ ಸಾಣೇಹಳ್ಳಿ ಪೀಠದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಹುತಾತ್ಮ ರೈತರ ಭವನ ನಿರ್ಮಾಣಕ್ಕೆ ಜನಪ್ರತಿನಿಧಿಗಳು ಕಳೆದ ವರ್ಷವೇ ಭರವಸೆ ನೀಡಿದ್ದರು. ಆದರೆ, ಇದುವರೆಗೂ ಭವನ ನಿರ್ಮಾಣವಾಗಿಲ್ಲ. ಮುಂದಿನ ವರ್ಷದ ಒಳಗಾದರೂ ಭವನ ನಿರ್ಮಾಣವಾಗಲಿ ಎಂದು ಆಶಿಸಿದರು.

ಶಾಸಕ ಕೆ.ಎಸ್. ಬಸವಂತಪ್ಪ ಮಾತನಾಡಿ, 22 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಜಾರಿಗೆ ತರಲು ಹಾಗೂ ಚೆಕ್‌ಡ್ಯಾಂಗಳನ್ನು ನಿರ್ಮಿಸಲು ಕ್ರಮ ಸರ್ಕಾರದ ಹಂತದಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ಕರ್ನಾಟಕ ತಾಂಡ ಅಭಿವೃದ್ಧಿ ನಿಗಮದ ಅಧ್ಯಕ್ಷ ಎನ್. ಜಯದೇವನಾಯ್ಕ ಮಾತನಾಡಿ, ರೈತರು ಒಗ್ಗಟ್ಟಾಗಬೇಕು. ಆಗ ಮಾತ್ರ ಅವರ ಬೇಡಿಕೆಗೆ ಬಲ ಸಿಗುತ್ತದೆ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ರೈತ



### ಎಸ್ಸೆಸ್ಸೆಂಗೆ ಮುಂದಿನ ಸಿಎಂ ಆಗುವ ಸಾಮರ್ಥ್ಯ

**ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಮುಖ್ಯಮಂತ್ರಿಯಾಗುವ ಸಾಮರ್ಥ್ಯ ಹೊಂದಿದ್ದಾರೆ. ಅವರು ಮನಸ್ಸು ಮಾಡಿದರೆ ಮುಂದಿನ ಮುಖ್ಯಮಂತ್ರಿಯಾಗಬಹುದು ಎಂದು ಸಾಣೇಹಳ್ಳಿ ಶಾಖಾ ಮಠದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.**

**ಕಳೆದ ಬಾರಿ ಮಲ್ಲಿಕಾರ್ಜುನ್ ಅವರು ಪರಾಭವಗೊಂಡಾಗ ಸಾರ್ವಜನಿಕ ಜೀವನದಿಂದ ಹಿಂದೆ ಸರಿದು ಸ್ವಂತ ಉದ್ಯಮಗಳ ಕಡೆ ಹೆಚ್ಚು ಗಮನ ಹರಿಸಿದ್ದರು. ಆ ರೀತಿ ಮಾಡದೇ, ರಾಜಕೀಯದಲ್ಲಿ ಸೋಲು - ಗೆಲುವು ಸಮಾನವಾಗಿ ಸ್ವೀಕರಿಸಬೇಕು ಎಂದು ಶ್ರೀಗಳು ಕಿವಿಮಾತು ಹೇಳಿದರು.**

### ಆರ್ಥಿಕ ನೀತಿಗಳಿಂದ ರೈತರ ಸಾವಾದರೂ ಹುತಾತ್ಮರೇ

**ಪೊಲೀಸರ ಗುಂಡಿಗೆ ಬಲಿಯಾದ ರೈತರನ್ನು ಹುತಾತ್ಮರೆಂದು ಪರಿಗಣಿಸಲಾಗುತ್ತಿದೆ. ಆದರೆ, ಸರ್ಕಾರದ ಆರ್ಥಿಕ ನೀತಿಗಳಿಂದ ರೈತರು ಸಂಕಷ್ಟಕ್ಕೆ ಸಿಲುಕಿ ಆತ್ಮಹತ್ಯೆ ಮಾಡಿಕೊಂಡರೂ ಅವರನ್ನು ಹುತಾತ್ಮರೆಂದು ಪರಿಗಣಿಸಬೇಕು ಎಂದು ರೈತ ಮುಖಂಡ ತೇಜಸ್ವಿ ಪಟೇಲ್ ಅಭಿಪ್ರಾಯ ಪಟ್ಟರು. ಗೋಲಿಬಾರ್‌ನಿಂದ ಹುತಾತ್ಮರಾದ ರೈತರ ಕುಟುಂಬದವರಿಗೆ ಮಾಸಾಶನ ಕೊಡಬೇಕು ಹಾಗೂ ಅವರ ಕುಟುಂಬದವರಿಗೆ ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸಬೇಕು ಎಂದೂ ಅವರು ಒತ್ತಾಯಿಸಿದರು.**

### ರೈತರ ವಿರುದ್ಧದ ಪ್ರಕರಣಗಳು ವಾಪಸ್

**ದಾವಣಗೆರೆಯ ರೈತ ಭವನದ ಜಾಗ ಪರಭಾರೆ ಮಾಡಬಾರದು ಹಾಗೂ ಎ.ಪಿ.ಎಂ.ಸಿ. ಜಾಗವನ್ನು ಮಾರಬಾರದು ಎಂದು ಪ್ರತಿಭಟನೆ ನಡೆಸಿದ ರೈತರ ವಿರುದ್ಧ ಪೊಲೀಸ್ ಪ್ರಕರಣ ದಾಖಲಿಸಲಾಗಿದೆ. ಈ ಪ್ರಕರಣಗಳನ್ನು ವಾಪಸ್ ಪಡೆಯಬೇಕು ಎಂದು ರೈತರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಬಳಿ ಒತ್ತಾಯಿಸಿದರು. ಈ ಬಗ್ಗೆ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಚನೆ ನೀಡುವುದಾಗಿ ಸಚಿವ ಎಸ್ಸೆಸ್ಸೆಂ ಹೇಳಿದರು.**



ಹುತಾತ್ಮರ ಸ್ಮರಣಾರ್ಥ ಸಮಿತಿ ಅಧ್ಯಕ್ಷ ಎನ್.ಜಿ. ಪುಟ್ಟಸ್ವಾಮಿ ಮಾತನಾಡಿ, ರೈತ ಹುತಾತ್ಮರ ಸಮುದಾಯ ಭವನ ನಿರ್ಮಾಣದ ಕಾರ್ಯ ಸಾಕಷ್ಟು ವರ್ಷಗಳಿಂದ ಬಾಕಿ ಇದೆ. ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ತ್ವರಿತವಾಗಿ ಈ ಕಾರ್ಯ ಪೂರ್ಣಗೊಳಿಸಬೇಕು ಎಂದು ಒತ್ತಾಯಿಸಿದರು.

ವೇದಿಕೆ ಮೇಲೆ ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಬಿ. ಇಟ್ನಾಳ್, ತಹಶೀಲ್ದಾರ್ ಎಂ.ಬಿ. ಅಶ್ವಥ್, ಪಂಚಾಯತ್ ರಾಜ್ ಇಲಾಖೆ ಕಾರ್ಯಪಾಲಕ ಇಂಜಿನಿಯರ್ ಕೆ.ಎನ್. ಶಿವಮೂರ್ತಿ, ಹುತಾತ್ಮರ ಸ್ಮರಣಾರ್ಥ ಸಮಿತಿ ಗೌರವಾಧ್ಯಕ್ಷ ಹೆಚ್. ನಂಜುಂಡಪ್ಪ, ರೈತ ಮುಖಂಡರಾದ ಕಕ್ಕರಗೊಳ್ಳ ಕಲ್ಲಿಂಗಪ್ಪ, ಆವರಗೆರೆ ರುದ್ರಮುನಿ, ಮಲ್ಲಶೆಟ್ಟಿಹಳ್ಳಿ ಚನ್ನಬಸಪ್ಪ, ಚಿನ್ನಸಮುದ್ರ ಶೇಖರನಾಯ್ಕ, ಶಾಮನೂರು ಲಿಂಗರಾಜ್, ಶ್ರೀಮತಿ ಅಕ್ಕಮಹಾದೇವಿ, ಬುಳ್ಳಾಪುರ ಹನುಮಂತಪ್ಪ, ಆನಗೋಡು ರವಿ, ಹೆದ್ನೆ ಮುರುಗೇಶಪ್ಪ, ಅರುಣ್ ಕುಮಾರ್ ಕುರುಡಿ, ಕೊಗ್ಗನೂರು ಹನುಮಂತಪ್ಪ, ಬಿ.ಎಂ. ಷಣ್ಮುಖಯ್ಯ, ಹೊನ್ನಾಯಕನಹಳ್ಳಿ ಮುರುಗೇಂದ್ರಪ್ಪ, ತೋಳಹುಣಸೆ ಗೌಡ್ರ ಮಹೇಶ್ವರಪ್ಪ ಉಪಸ್ಥಿತರಿದ್ದರು.

# ಸಿಎಂ ಕೇಜ್ರಿವಾಲ್‌ಗೆ ಸುಪ್ರೀಂ ಜಾಮೀನು

ನವದೆಹಲಿ, ಸೆ. 13 - ಅಬಕಾರಿ ನೀತಿ ಪ್ರಕರಣದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಬಂಧನ ಸಮರ್ಥನೀಯವಲ್ಲ ಎಂದಿರುವ ಸುಪ್ರೀಂ ಕೋರ್ಟ್, ಸಿ.ಬಿ.ಐ. ಪಂಜರದ ಗಿಳಿ ಎಂಬ ಭಾವನೆ ತೊಡೆದು ಹಾಕಬೇಕಿದೆ ಎಂದು ತಿಳಿಸಿದೆ. ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಹಾಗೂ ಉಜ್ಜಲ್ ಭುಯಾನ್ ಅವರನ್ನು ಒಳಗೊಂಡ ಪೀಠ ಕೇಜ್ರಿವಾಲ್ ಅವರಿಗೆ ಜಾಮೀನು ನೀಡಿದೆ.

ಪ್ರತ್ಯೇಕ ಆದರೆ, ಏಕರೂಪದ ತೀರ್ಪು ಬರೆದಿರುವ ಉಭಯ ನ್ಯಾಯಮೂರ್ತಿಗಳು, ಜಾಮೀನಿಗೆ ಆದೇಶ ಹೊರಡಿಸಿದ್ದಾರೆ.

ಜಾರಿ ನಿರ್ದೇಶನಾಲಯ ಪ್ರಕರಣದಲ್ಲಿ ಕೇಜ್ರಿವಾಲ್ ಜಾಮೀನು ಪಡೆಯುವುದಕ್ಕೆ ಅಡ್ಡಿಪಡಿಸುವ ಸಲುವಾಗಿ ಸಿ.ಬಿ.ಐ. ಬಂಧನದ ಕ್ರಮ ತೆಗೆದುಕೊಂಡಿದೆ ಎಂದು ನ್ಯಾಯಮೂರ್ತಿ ಭುಯಾನ್ ಹೇಳಿದ್ದಾರೆ. ಆದರೆ, ಸಿ.ಬಿ.ಐ. ಬಂಧನ ಅಕ್ರಮವಲ್ಲ ಎಂದು ನ್ಯಾಯಮೂರ್ತಿ ಸೂರ್ಯಕಾಂತ್ ಹೇಳಿದ್ದಾರೆ.

ಸಿ.ಬಿ.ಐ. ಪ್ರಮುಖ ತನಿಖಾ ಸಂಸ್ಥೆಯಾಗಿದೆ. ಇದು ಸ್ವತಂತ್ರವಾಗಿ ಕಾರ್ಯ ನಿರ್ವಹಿಸಬೇಕು. ಸ್ವತಂತ್ರವಾಗಿ ಕಾರ್ಯನಿರ್ವ ಹಿಸುತ್ತಿರುವ ಭಾವನೆಯೂ



ಬರುವಂತಿರಬೇಕು. ಆದರೆ, ಕೇಜ್ರಿವಾಲ್ ಅವರನ್ನು ಸಿ.ಬಿ.ಐ. ಪಕ್ಷಪಾತಿಯಾಗಿ ಬಂಧಿಸಿದೆ ಎಂದು ನ್ಯಾಯಮೂರ್ತಿ ಭುಯಾನ್ ತಿಳಿಸಿದ್ದಾರೆ.

ಪ್ರಜಾಪ್ರಭುತ್ವದಲ್ಲಿ ಸರ್ಕಾರಗಳು ಕಾನೂನು ಆಡಳಿತ ಪಾಲಿಸಬೇಕು. ಪ್ರಜಾಪ್ರಭುತ್ವದಲ್ಲಿ ಭಾವನೆಗಳೂ ಪ್ರಾಮುಖ್ಯತೆ ಪಡೆದುಕೊಳ್ಳುತ್ತವೆ. ತನಿಖಾ ಸಂಸ್ಥೆಗಳು ಸಂಶಯಕ್ಕೆ ಅತೀತವಾಗಿರಬೇಕು. ಈ ಹಿಂದೆ ಸಿ.ಬಿ.ಐ. ಪಂಜರದ ಗಿಳಿ ಎಂದು ಸುಪ್ರೀಂ ಕೋರ್ಟ್ ಟಿಪ್ಪಣಿ ಮಾಡಿತ್ತು. ತಾನು ಪಂಜರದ ಗಿಳಿ ಅಲ್ಲ ಎಂಬ ಭಾವನೆಯನ್ನು ಸಿ.ಬಿ.ಐ. ಮೂಡಿಸಬೇಕು ಎಂದು ನ್ಯಾಯಮೂರ್ತಿ ಹೇಳಿದ್ದಾರೆ.

ಆಗಸ್ಟ್ 17, 2022ರಲ್ಲಿ ಸಿ.ಬಿ.ಐ. ಪ್ರಕರಣ ದಾಖಲಿಸಿತ್ತು. ಮಾರ್ಚ್ 21ರಂದು ಜಾರಿ ನಿರ್ದೇಶನಾಲಯ ಕೇಜ್ರಿವಾಲ್ ಬಂಧಿಸಿತ್ತು.

ಆದರೆ, ಏಪ್ರಿಲ್ 16, 2023ರವರೆಗೂ ಕೇಜ್ರಿವಾಲ್ ವಿಚಾರಣೆಯ ಅಗತ್ಯವಿದೆ ಎಂದು ಸಿ.ಬಿ.ಐ. ಭಾವಿಸಿರಲಿಲ್ಲ. 22 ತಿಂಗಳ ಕಾಲ ಸಿ.ಬಿ.ಐ.ಗೆ ಬಂಧನದ ಅಗತ್ಯ ಕಂಡು ಬರಲಿಲ್ಲ.

### ಸಿಬಿಐ ಬಂಧನದ ಕ್ರಮಕ್ಕೆ ತೀವ್ರ ಆಕ್ಷೇಪ

ಆದರೆ, ಜಾರಿ ನಿರ್ದೇಶನಾಲಯದ ಪ್ರಕರಣದಲ್ಲಿ ಕೇಜ್ರಿವಾಲ್‌ಗೆ ಜಾಮೀನು ನೀಡಿದ ನಂತರವೇ ಸಿ.ಬಿ.ಐ.ಗೆ ವಿಚಾರಣೆಯ ಅಗತ್ಯ ಕಂಡು ಬಂದಿತು, ಆಗ ಕೇಜ್ರಿವಾಲ್ ಅವರನ್ನು ವಶಕ್ಕೆ ತೆಗೆದುಕೊಳ್ಳಲಾಗಿತ್ತು ಎಂದು ನ್ಯಾಯಮೂರ್ತಿ ಹೇಳಿದ್ದಾರೆ.

ಈ ರೀತಿಯ ಕ್ರಮದಿಂದ ಬಂಧನದ ಅಗತ್ಯಕ್ಕಿಂತ, ಬಂಧನದ ಸಮಯವನ್ನು ಪ್ರಶ್ನಿಸುವಂತೆ ಮಾಡುತ್ತದೆ ಎಂದು ನ್ಯಾಯಮೂರ್ತಿ ಭುಯಾನ್ ಹೇಳಿದ್ದಾರೆ.

ಆರೋಪಿ ನುಣುಚಿಕೊಳ್ಳುವ ಉತ್ತರ ನೀಡುತ್ತಿದ್ದಾರೆ ಎಂದು ಸಿ.ಬಿ.ಐ. ಭಾವಿಸಿದ ಮಾತ್ರಕ್ಕೆ ಜಾಮೀನು ನಿರಾಕರಿಸಲಾಗದು. ಆರೋಪಿ ಮೌನವಾಗಿರುವ ಹಕ್ಕು ಹೊಂದಿದ್ದಾರೆ ಎಂದು ನ್ಯಾಯಮೂರ್ತಿ ಭುಯಾನ್ ಹೇಳಿದ್ದಾರೆ.

## ನಗರದಲ್ಲಿ ಇಂದು ಕರವೇ ಕರಾಳ ದಿನ

ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾ ಘಟಕದ ವತಿಯಿಂದ ಇಂದು ಮಧ್ಯಾಹ್ನ 12 ಗಂಟೆಗೆ ಪಿ.ಬಿ. ರಸ್ತೆಯಲ್ಲಿರುವ ಲೋಕೋಪಯೋಗಿ ಇಲಾಖೆ ಕಚೇರಿ ಬಳಿ ಕರಾಳ ದಿನ ಆಚರಿಸಲಾಗುವುದು ಎಂದು ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ತಿಳಿಸಿದ್ದಾರೆ.

ಕೇಂದ್ರ ಸರ್ಕಾರವು ಸೆ.14ರಂದು 'ಹಿಂದಿ ದಿವಸ್' ಆಚರಣೆ ಮಾಡುತ್ತಾ ಬಂದಿದ್ದು, 2010ರಿಂದ ಕರವೇ ಜಿಲ್ಲಾ ಘಟಕ ಸರ್ಕಾರದ ಎಲ್ಲಾ ಇಲಾಖೆಗಳ ಮುಂಭಾಗ ಪ್ರತಿಭಟನೆ ನಡೆಸಿ ಹಿಂದಿ ಸಪ್ತಾಹ ಮಾಡುವ ಇಲಾಖೆಗಳ ವಿರುದ್ಧ ಹೋರಾಟ ಮಾಡುತ್ತಾ ಬಂದಿದೆ ಎಂದಿದ್ದಾರೆ.

ರಾಜ್ಯ ಸರ್ಕಾರದ ಲೋಕೋಪಯೋಗಿ ಇಲಾಖೆಯು ಹಿಂದಿ ಭಾಷೆಯನ್ನು ಪ್ರೋತ್ಸಾಹಿಸುವುದು ಎಷ್ಟರ ಮಟ್ಟಿಗೆ ಸರಿ ? ಬೀರೂರು-ಸಮ್ಮಸಗಿ ರಾಜ್ಯ ಹೆದ್ದಾರಿಯಲ್ಲಿ ಮಾರ್ಗಸೂಚಿ ಫಲಕಗಳನ್ನು ಹಿಂದಿ ಭಾಷೆಯಲ್ಲಿ ಹಾಕಿರುವು ದನ್ನು ಕರವೇ ತೀವ್ರವಾಗಿ ಖಂಡಿಸುತ್ತದೆ.

ರಾಜ್ಯದಲ್ಲಿ ಹಿಂದಿ ಭಾಷೆ ರಾರಾಜಿಸುವುದನ್ನು ಕರವೇ ಸಹಿಸುವುದಿಲ್ಲ. ಇದನ್ನು ಖಂಡಿಸಿ ಪ್ರತಿಭಟನೆ ನಡೆಸಲಾಗುವುದು. ಯಾವುದೇ ಬ್ಯಾಂಕುಗಳು, ಶಾಲಾ-ಕಾಲೇಜುಗಳು, ರೈಲ್ವೆ ಇಲಾಖೆ ಹಾಗೂ ಅಂಚೆ ಕಚೇರಿಗಳಲ್ಲಿ 'ಹಿಂದಿ ಸಪ್ತಾಹ' ಅಥವಾ 'ಹಿಂದಿ ದಿವಸ್' ಹೆಸರಲ್ಲಿ ಕಾರ್ಯಕ್ರಮ ನಡೆಸಿದರೆ ಆ ಕಚೇರಿಗಳ ಮೇಲೆ ದಾಳಿ ನಡೆಸಲಾಗುವುದೆಂದು ಎಚ್ಚರಿಕೆ ನೀಡಿದ್ದಾರೆ.

## ಎಲೆಬೇತೂರಿನಲ್ಲಿ ಇಂದು ಅನ್ನ ಸಂತರ್ಪಣೆ

ಶ್ರೀ ಗಜಕರ್ಣ ಫ್ರೆಂಡ್ಸ್ ಗ್ರೂಪ್ ವತಿಯಿಂದ ಎಲೆಬೇತೂರಿನ ಪುಟಗನಾಳ್ ರಸ್ತೆಯಲ್ಲಿ ಗಣಪತಿ ಪ್ರತಿಷ್ಠಾಪಿಸಲಾಗಿದ್ದು, ಪ್ರಯುಕ್ತ ಇಂದು ಅನ್ನ ಸಂತರ್ಪಣೆ ನಡೆಯಲಿದೆ.

**1946**
**ಕೆಲಸಕ್ಕೆ ಬೇಕಾಗಿದ್ದಾರೆ**
**ಟೀ ಹಾಗೂ ಕಾಫಿ ಮಾಡುವವರು ಹಾಗೂ ಜವಾಬ್ದಾರಿ ಕೆಲಸಗಾರರು ಬೇಕಾಗಿದ್ದಾರೆ.**
**ಸ್ಥಳ : 1946 ಪ್ರಕಾಶ್ ಕಾಫಿ ವರ್ಕ್ಸ್, ದಾವಣಗೆರೆ.**
**ಮೊ : 99004 38052, 97401 53513**

**ವಿಶ್ವಕರ್ಮ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್**
**ನಂ. 75/1, ತುಳಸಿ ಕಾಂಪ್ಲೆಕ್ಸ್, 1ನೇ ಮಹಡಿ, ವಸಂತ ರಸ್ತೆ, ದಾವಣಗೆರೆ-1**
ರಿ.ನಂ.ಎ.ಆರ್. 31, ಆರ್.ಜಿ.ಎನ್. 23240/97-98 ತಾ. 1.7.1997
ದಿನಾಂಕ : 30.09.2024
**ಪ್ರತಿಭಾ ಪುರಸ್ಕಾರ**
ಸೊಸೈಟಿಯು 2023-24ನೇ ಸಾಲಿಗೆ ತನ್ನ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡುತ್ತಿದ್ದು, 2023-24ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ, ಪಿಯುಸಿಯಲ್ಲಿ ಶೇ. 80ಕ್ಕಿಂತ ಹೆಚ್ಚು ಅಂಕ ಪಡೆದು ತೇರ್ಗಡೆಯಾದ ಅರ್ಹ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲು ಆಡಳಿತ ಮಂಡಳಿ ತೀರ್ಮಾನಿಸಿದೆ.
ಆದ್ದರಿಂದ ದಿನಾಂಕ : 18.09.2024ರೊಳಗೆ (ಅರ್ಹ ಸದಸ್ಯರ ಮಕ್ಕಳು) ವಿದ್ಯಾರ್ಥಿಗಳ ಅಂಕಪಟ್ಟಿ, ಆಧಾರ್ ಕಾರ್ಡ್, 2 ಪಾಸ್‌ಪೋರ್ಟ್ ಸೈಜ್ ಫೋಟೋ ಮತ್ತು ಪೋಷಕರ ಸಂಘದ ಸದಸ್ಯತ್ವದ ಗುರುತಿನ ಚೀಟಿಯನ್ನು ಮುಖ್ಯ ಕಚೇರಿಗೆ ಸಲ್ಲಿಸಲು ಸೂಚಿಸಲಾಗಿದೆ.
ಆಯ್ಕೆಯಾದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ದಿನಾಂಕ : 22.09.2024 ರಂದು ಶ್ರೀ ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲೆ, ಗಡಿಯಾರ ಕಂಬದ ಹತ್ತಿರ, ದಾವಣಗೆರೆ. ಇಲ್ಲಿ ನಡೆಯುವ ಸಂಘದ 27ನೇ ವಾರ್ಷಿಕ ಮಹಾಸಭೆಯಲ್ಲಿ ಸನ್ಮಾನಿಸಲಾಗುವುದು.
ಹೆಚ್ಚಿನ ಮಾಹಿತಿಗಾಗಿ ಮೊ.ನಂ. 95908 07050, ದೂರವಾಣಿ ಸಂಖ್ಯೆ 08192 271472ಗೆ ಸಂಪರ್ಕಿಸಿ.
ಸಹಿ/- **ಆಡಳಿತ ಮಂಡಳಿ**, ವಿಶ್ವಕರ್ಮ ಕ್ರೆಡಿಟ್ ಕೋ-ಆಪ್ ಸೊಸೈಟಿ ಲಿ.,

## ನಾಳೆ ಶರಣ ಸಾಹಿತ್ಯ ಪರಿಷತ್ತಿನ ರಾಜ್ಯ ಮಟ್ಟದ ಮಹಾಸಭೆ



ದಾವಣಗೆರೆ, ಸೆ.13- ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ವತಿಯಿಂದ ನಗರದ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನದಲ್ಲಿ ನಾಡಿದ್ದು ದಿನಾಂಕ 15ರ ಭಾನುವಾರ ಬೆಳಗ್ಗೆ 11.30ಕ್ಕೆ ರಾಜ್ಯ ಮಟ್ಟದ 30ನೇ ವಾರ್ಷಿಕ ಮಹಾಸಭೆ ನಡೆಯಲಿದೆ ಎಂದು ಪರಿಷತ್ತಿನ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ತಿಳಿಸಿದರು.


ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂದು ಸುತ್ತೂರಿನ ಶಿವರಾತ್ರಿ ದೇಶಿ ಕೇಂದ್ರದ ಶ್ರೀಗಳು, ಗದಗಿನ ತೋಂಟದ ಸಿದ್ದರಾಮ ಶ್ರೀಗಳು ಹಾಗೂ ಪಾಂಡೋಮಟ್ಟಿಯ ಗುರು ಬಸವ ಶ್ರೀಗಳು ಸಾನ್ನಿಧ್ಯ ವಹಿಸಲಿದ್ದಾರೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಅವರು ಮಹಾಸಭೆಯನ್ನು ಉದ್ಘಾಟಿಸಲಿದ್ದು, ಪರಿಷತ್ ಅಧ್ಯಕ್ಷ ಡಾ. ಸಿ. ಸೋಮಶೇಖರ್ ಅಧ್ಯಕ್ಷತೆ ವಹಿಸುವರು. ಪರಿಷತ್ತಿನ ಗೌರವ ಸಲಹೆಗಾರ ಗೊ.ರು. ಚನ್ನಬಸಪ್ಪ, ರಾಜ್ಯ ಕದಳಿ ಮಹಿಳಾ ವೇದಿಕೆಯ ಸಂಚಾಲಕರಾದ ಸುಶೀಲ ಸೋಮಶೇಖರ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಹೆಚ್.ಕೆ ಲಿಂಗರಾಜ್, ಡಾ. ಶಿವರಾಜ್ ಕಬ್ಬೂರು, ಲಿಂಗಾನಂದ ಕಮತ್ತಹಳ್ಳಿ, ಭರಮಪ್ಪ ಮೈಸೂರು, ಆರ್. ಸಿದ್ದೇಶಪ್ಪ, ಬಿ.ಟಿ. ಪ್ರಕಾಶ್, ಜಿ.ಎಂ. ಕುಮಾರ್, ಬುಳ್ಳಾಪುರದ ಮಲ್ಲಿಕಾರ್ಜುನಸ್ವಾಮಿ ಮತ್ತು ಇತರರು ಸುದ್ದಿಗೋಷ್ಠಿಯಲ್ಲಿದ್ದರು.

**ಹಾರ್ದಿಕ ಅಭಿನಂದನೆಗಳು**



**ದೊಡ್ಡಬಾತಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತದ** ನಿರ್ದೇಶಕರಾಗಿದ್ದ **ಶ್ರೀ ಕೆ.ಜಿ. ಬಸವರಾಜ್** ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಹಿನ್ನೆಲೆಯಲ್ಲಿ ತೆರವಾದ ಸ್ಥಾನಕ್ಕೆ ಅದೇ ಗ್ರಾಮದ **ಶ್ರೀ ಕೆ.ಜಿ.ಉಮೇಶ್** ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಶ್ರೀಯುತರಿಗೆ ಹಾರ್ದಿಕ ಶುಭಾಶಯಗಳು.
ಶುಭ ಕೋರುವವರು
ಅಧ್ಯಕ್ಷರು : **ಬಿ.ಎಂ. ಉಜ್ಜೇಶ್**
ಉಪಾಧ್ಯಕ್ಷರು : **ಶ್ರೀಮತಿ ರೇವಮ್ಮ**
ನಿರ್ದೇಶಕರುಗಳಾದ :
**• ಬಿ.ಎಂ. ಶೇಖರಪ್ಪ • ನಾಗರಾಜ ಪಿ.ಎ. • ಶ್ರೀಮತಿ ಗಾಯಿತ್ರಮ್ಮ • ಬಿ.ಜಿ. ವಿಶ್ವಾಂಬರ • ಬಿ.ಸಿದ್ದಪ್ಪ • ಹೆಚ್.ಪಿ. ಸಿದ್ದಪ್ಪ • ಹೆಚ್. ಆರ್. ಶಿವಕುಮಾರ್ • ಎಂ. ಮರುಳಸಿದ್ದಪ್ಪ • ಎ.ವಿ. ನಾಗರಾಜ್**
ಬ್ಯಾಂಕ್ ಪ್ರತಿನಿಧಿ : **• ಜಿ.ವಿ.ಅಭಿಲಾಷ್** (ಕ್ಷೇತ್ರಾಧಿಕಾರಿಗಳು, ಡಿಡಿಸಿಸಿ ಬ್ಯಾಂಕ್, ದಾವಣಗೆರೆ)
ಸಿಬ್ಬಂದಿ ವರ್ಗ : **ಮಲ್ಲೇಶಪ್ಪ ಹೆಚ್.ಆರ್.**, ಮುಖ್ಯಕಾರ್ಯನಿರ್ವಹಣಾಧಿಕಾರಿ, **ಎ.ವಿ.ಸಿದ್ದಪ್ಪ**, ಸಹಾಯಕರು
ಹಾಗೂ **ದೊಡ್ಡಬಾತಿ ಗ್ರಾಮಸ್ಥರು**



**ಇಂದು, ಶ್ರೀ ಮಟ್ಟಿ ಆಂಜನೇಯ ಸ್ವಾಮಿ ಪರವು**
ದಾವಣಗೆರೆ ವಿದ್ಯಾನಗರದ ಶ್ರೀ ಮಟ್ಟಿ ಆಂಜನೇಯ ಸ್ವಾಮಿಗೆ ಪ್ರತಿ ವರ್ಷ ಭಾದ್ರಪದ ಮಾಸದಲ್ಲಿ ಅನಾದಿ ಕಾಲದಿಂದಲೂ ಪರವು ಆಚರಣೆ ಮಾಡಿಕೊಂಡು ಬಂದಿರುವ ಪ್ರಯುಕ್ತ, **ದಿನಾಂಕ 14.09.2024ರ ಶನಿವಾರ ಮಧ್ಯಾಹ್ನ 12.00 ಗಂಟೆಯಿಂದ ಶ್ರೀ ಸ್ವಾಮಿಯ ಪರವು ಆರಾಧನೆ** ನಡೆಯಲಿದೆ. ಸರ್ವ ಭಕ್ತಾದಿಗಳು ಆಗಮಿಸಿ, ಸ್ವಾಮಿಯ ಆಶೀರ್ವಾದ ಪಡೆದು, ಪ್ರಸಾದ ಸ್ವೀಕರಿಸಿ, ಸ್ವಾಮಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.
**ಶ್ರೀ ಮಟ್ಟಿ ಆಂಜನೇಯ ಸ್ವಾಮಿ ಪರವು ಆಚರಣಾ ಸಮಿತಿ**
**ಶಾಮನೂರು, ವಿದ್ಯಾನಗರ, ದಾವಣಗೆರೆ.**

